

# ಅಧ್ಯಾಯ ೪




*ಹಂಪೆಯ ನರಸಿಂಹ*

## ಕರ್ನಾಟಕದ ಸುವರ್ಣಯುಗ ವಿಜಯನಗರ

ವಿಜಯನಗರದ ಆಳ್ವಿಕೆಯ ಪ್ರಾರಂಭದಲ್ಲಿ, ಡೆಕ್ಕನ್ ಹಾಗೂ ದಕ್ಷಿಣ ಭಾರತದ ಪರಿಸ್ಥಿತಿಯು ಗಂಭೀರವಾಗಿತ್ತು.ಇದಕ್ಕೆ ಕಾರಣ, ಮಹಮ್ಮದೀಯ ಧಾಳಿಗಳಿಂದ ವಾರಂಗಲ್ ರಾಜ್ಯಕ್ಕೆ ವಿನಾಶದ ಬೆದರಿಕೆ ಬಂದಿತು.ಕಳಿಂಗ ರಾಜ್ಯವನ್ನು ಅದಾಗಲೇ ಸ್ವಾಧೀನ ಪಡಿಸಿಕೊಳ್ಳಲಾಗಿತ್ತು.೧೩ನೆಯ ಶತಮಾನದ ಸೂಫಿ ಕವಿಯಾದ ಅಮೀರ್ ಖುಸ್ರುವಿನ ಪ್ರಕಾರ, ಕ್ರಿ.ಶ.೧೩೧೮ರಲ್ಲಿ ದೆಹಲಿಯ ಸಿಂಹಾಸನವನ್ನು ಏರಿದ ಮುಬಾರಕ್‌ನು ಹರಪಾಲನನ್ನು ಚಾವಟಿ ಏಟಿನಿಂದ ಹೊಡೆದು ಸಾಯಿಸಲಾಯಿತು. ದೇವಗಿರಿಯು ಮುಸಲ್ಮಾನ ಪ್ರಾಂತವಾಗಿ ವಾರಂಗಲ್‌ನ ಪ್ರತಾಪರುದ್ರನು ಶರಣಾಗತನಾದನು. ದಕ್ಷಿಣದ ರಾಜ್ಯಗಳ ನಡುವಣ ವೈರತ್ವವು, ಅದರಲ್ಲೂ ವಿಶೇಷವಾಗಿ ಯಾದವರು ಹಾಗೂ ಹೊಯ್ಸಳರ ನಡುವಣ ವೈಷಮ್ಯವು, ದಕ್ಷಿಣದಲ್ಲಿ ತಮ್ಮ ಅಧಿಕಾರವನ್ನು ವಿಸ್ತರಿಸಲು ಮುಸಲ್ಮಾನರಿಗೆ ಸುಲಭಗೊಳಿಸಿತು. ಪ್ರಾರಂಭದಲ್ಲಿ ಲೂಟಿ ಮಾಡುವ ಉದ್ದೇಶದೊಂದಿಗೆ ಈ ಧಾಳಿಗಳನ್ನು ಕೈಗೊಳ್ಳಲಾಯಿತು, ಆದರೆ, ಮಹಮ್ಮದ್-ಬಿನ್-ತುಘಲಕ್‌ನೊಂದಿಗೆ ಅವರ ಅಧಿಪತ್ಯದ ವಿಸ್ತರಣೆಯು ಮುಸಲ್ಮಾನ ಕಾರ್ಯನೀತಿಯ ಘೋಷಿತ ಉದ್ದೇಶ ವಾಯಿತು.

ದಕ್ಷಿಣದಲ್ಲಿ ಉಂಟಾಗಿದ್ದ ಸಾಮಾನ್ಯ ರಾಜಕೀಯ ಗೊಂದಲದಿಂದ, ಮುಸಲ್ಮಾನ ಸಾಹಸಿಗರಿಗೆ ಸಣ್ಣ ಸಾರ್ವಭೌಮ ಸಂಸ್ಥಾನಗಳನ್ನು, ಪ್ರಾಂತಗಳನ್ನು ಸ್ಥಾಪನೆ ಮಾಡಲು ಡೆಕ್ಕನ್ ಪ್ರದೇಶವು ಆಕರ್ಷಕ ಕ್ಷೇತ್ರವಾಯಿತು. ಅವರ ಧರ್ಮಾಂಧೀಯ ಹುಮ್ಮಸ್ಸು , ಇತರ ಧರ್ಮಗಳ ಬಗೆಗಿನ ಅತಿಯಾದ ಅಸಹಿಷ್ಣುತೆ ಹಾಗೂ ಎಲ್ಲರಿಗೂ ತೋರುವ ಕ್ರೌರ್ಯದಿಂದಾಗಿ ಅವರನ್ನು ಅಸಹನೀಯವಾಗಿ ನೋಡುವಂತೆ ಮಾಡಿತ್ತು.ಹೊಯ್ಸಳರು




ಹಂಪೆಯ ನಕಾಸೆ

ತಮ್ಮ ಮೊದಲಿನ ಚೈತನ್ಯವನ್ನು ಉಳಿಸಿಕೊಂಡಿದ್ದರೆ, ಎಂಟನೆಯ ಶತಮಾನದ ಪ್ರಾರಂಭದಲ್ಲಿ ಗುಜರಾತಿನಲ್ಲಿ ಉಂಟಾದ ಅರಬ್ ಧಾಳಿಯನ್ನೊಡೆದೋಡಿಸಿದ ಮಹಾನ್ ರಾಷ್ಟ್ರಕೂಟ ಸಾಮ್ರಾಟರಂತೆ, ಇವರೂ ಸಹ ಮುಸಲ್ಮಾನ ಧಾಳಿಕೋರರನ್ನು ಎದುರಿಸಿ, ಅವರ ಮುನ್ನಡೆಯನ್ನು ಹತ್ತಿಕ್ಕಲು ಸಾಧ್ಯವಾಗುತ್ತಿತ್ತು.ಆಧ್ಯಾತ್ಮಿಕ ಒಗ್ಗಟ್ಟಿನಿಂದ ತಮ್ಮ ಧರ್ಮವನ್ನು ರಕ್ಷಿಸಲು ಹಿಂದೂಗಳು ಎಚ್ಚೆತ್ತಿದ್ದರೆ, ಮುಸಲ್ಮಾನ ಮುನ್ನಡೆ ಹಾಗೂ ವಿಭಜನಾತ್ಮಕ ಪ್ರವೃತ್ತಿಗಳಿಗೆ ತಡೆಹಾಕಿ, ಅವರಿಂದ ಹಿಂದೂ ಸಂಸ್ಕೃತಿಯ ಅವನತಿಯಾಗುವುದನ್ನು ತಡೆಯಬಹುದಾಗಿತ್ತು.

## ವಿಜಯನಗರ ಸಾಮ್ರಾಜ್ಯ

ಹಿಂದೂ ಭಾರತವು ಕುಸಿಯುವಂತೆ ತೋರುತ್ತಿದ್ದು ಈ ಭ್ರಮೆಯನ್ನು ಜನಮಾನಸದಿಂದ ಅಳಿಸಿ. ಸಮಾಜದಲ್ಲಿ ವ್ಯಕ್ತಿಯ ಮೌಲ್ಯವನ್ನು ಎತ್ತಿ ಹಿಡಿಯಬೇಕಿತ್ತು, ಹಿಂದೂ ಧರ್ಮಕ್ಕೆ ಅಚಲ ಶ್ರದ್ಧೆ ಹಾಗೂ ಸಂಸ್ಕೃತಿಗೆ ಮಾನ್ಯತೆ ಸಲ್ಲಬೇಕಿತ್ತು.ಸಂಗಮ ವಂಶದ ಇಬ್ಬರು ಸಹೋದರರಾದ ಹಕ್ಕ ಹಾಗೂ ಬುಕ್ಕರನ್ನು ದೆಹಲಿಗೆ ಸೆರೆಯಾಳುಗಳಾಗಿ ಕರೆದುಕೊಂಡು ಹೋಗಿ, ಅವರನ್ನು ಸುಲ್ತಾನನ ಸೇವೆಗೆಂದು ನಿಯುಕ್ತಗೊಳಿಸಲಾಯಿತು. ಕಂಪಿಲಿಯಲ್ಲಿ ದಂಗೆ ಉಂಟಾದಾಗ ಅದನ್ನು ಹತ್ತಿಕ್ಕಲು ಸುಲ್ತಾನನು ಈ ಸಹೋದರರರನ್ನು ಕಳುಹಿಸಿದನು. ಹಕ್ಕ ಹಾಗೂ ಬುಕ್ಕರು ದಕ್ಷಿಣಕ್ಕೆ ಬಂದು ವಿದ್ಯಾರಣ್ಯ ಮುನಿಗಳ ಪ್ರಭಾವಕ್ಕೆ ಒಳಗಾಗಿ, ಪ್ರೇರಣೆ ಪಡೆದು, ಹಂಪಿಯಲ್ಲಿ ಧರ್ಮರಾಜ್ಯದ ಸ್ಥಾಪನೆ ಮಾಡಿದರು. ಈ ಪ್ರದೇಶವು ಆಳವಾದ ನದಿ, ಕಮರಿ, ಕಣಿವೆ ಹಾಗೂ ಬೆಟ್ಟದ ಶ್ರೇಣಿಗಳಿಂದ ಆವೃತ್ತಗೊಂಡು ಅಭೇದ್ಯವಾಗಿದ್ದು, ನೈಸರ್ಗಿಕ ಕೋಟೆಯೇ ಆಗಿತ್ತು.

ವಿದ್ಯಾರಣ್ಯರ (ನಂತರ ಶೃಂಗೇರಿ ಮಠದ ಸ್ವಾಮಿಗಳಾದರು) ಶುಭ ಹಾರೈಕೆಯು ವಿಜಯನಗರ ರಾಜ್ಯ ಹಾಗೂ ರಾಜಧಾನಿ ಪಟ್ಟಣದ ಪುನರ್‌ನಿರ್ಮಾಣಕ್ಕೆ ನೆರವಾಯಿತು. ಇದು ವಿದ್ಯಾರಣ್ಯರ ಜೀವನ ಚರಿತ್ರೆ ಅವರ ಬೌದ್ಧಿಕ ಶಕ್ತಿಯನ್ನು ತೋರಿಸುತ್ತದೆ. ಅವರಲ್ಲಿದ್ದ ವಿಶೇಷ ಶಕ್ತಿಯು ಸುತ್ತಲಿನವರಿಗೆ ಪ್ರೇರಣೆ ನೀಡಿತು. ಅವರಿಗಿದ್ದ ದಿವ್ಯದೃಷ್ಟಿ ಹಾಗೂ ಮಾನಸಿಕ ಚೈತನ್ಯವು ಮಾನವ ಇತಿಹಾಸದಲ್ಲಿ ಅಪರೂಪವಾದುದು. ಹಂಪಿಯಲ್ಲಿ, ವಿದ್ಯಾರಣ್ಯರು ಆ ಸ್ಥಾನದ ಪ್ರಾಚೀನತೆಯನ್ನು ಸ್ಮರಿಸಿ, ವಾಲಿ, ಸುಗ್ರೀವ ಹಾಗೂ ಹನುಮಾನರ ತವರಾದ ಕಿಷ್ಕಿಂದವು, ರಾಮನ ಭೇಟಿಯಿಂದ ಪಡೆದ ಪಾವಿತ್ರ್ಯತೆಯನ್ನು ಪುನರುಚ್ಚರಿಸಿದರು. ಈ ಸ್ಥಾನಕ್ಕೆ ಶ್ರೀಮಂತ ಐತಿಹಾಸಿಕ ಹಾಗೂ ಸಂಪ್ರದಾಯ ಸ್ಮರಣೆಗಳ ಅವಿರತ ಮುಂದುವರಿಕೆಯು ಇದ್ದಿತು.

ಸಂಸ್ಕೃತಿಯ ಸಂರಕ್ಷಣೆಗಾಗಿ, ದೇಶಭಕ್ತಿಯ ಭಾವನೆಯನ್ನು ಮೂಡಿಸಲು ಸಮಕಾಲೀನ ಪರಿಸ್ಥಿತಿಗಳಿಗೆ ಭೂತಕಾಲದ ಮಹತ್ತರವಾದ ಕಲಿಕೆಗಳನ್ನು ಮುಖಂಡರು ಅಳವಡಿಸಿಕೊಳ್ಳಬೇಕೆಂದು ವಿದ್ಯಾರಣ್ಯರು ಅಭಿಪ್ರಾಯಪಟ್ಟರು. ಹಕ್ಕ–ಬುಕ್ಕರು ಹಾಗೂ ಅವರ ಅನುಯಾಯಿಗಳಿಗೆ ಬೇಕಾದುದೂ ಇದೇ ಆಗಿತ್ತು.



ಶಿಲಾರಥ, ವಿಜಯ ವಿಠಲ ಮಂದಿರ ಹಂಪೆ

## ಸಂಗಮ ರಾಜವಂಶ

ಸಂಗಮನ ಐದು ಗಂಡು ಮಕ್ಕಳ ಪೈಕಿ ಒಂದನೆಯ ಹರಿಹರನು ಎಲ್ಲರಿಗಿಂತ ಹಿರಿಯನಿದ್ದು; ಈ ರಾಜವಂಶವು ಆತನ ತಂದೆಯ ಹೆಸರನ್ನೇ ಹೊತ್ತಿತ್ತು. ರಾಜ್ಯ ಹಾಗೂ ರಾಜಧಾನಿಯ ಪುನರ್‌ನಿರ್ಮಾಣ ಮಾಡಲು, ವಿದ್ಯಾರಣ್ಯರನ್ನು ಭೇಟಿ ಮಾಡಿ, ಅವರ ಆಶೀರ್ವಾದವನ್ನು ಕೋರಿದನು. ಈ ಕುಟುಂಬದ ಪ್ರಾರಂಭಿಕ ಅರಸರು ಕಾಳಾಮುಖ ಅಥವಾ ಪಾಶುಪತ ಶೈಲಿಯ ಶೈವ ಸಿದ್ಧಾಂತದ ಶಿಷ್ಯರೆಂದೂ, ಹಾಗೂ ಅವರ ಗುರುಗಳು ಕ್ರಿಯಾಶಕ್ತಿ ಎಂಬ ನಾಮಾಂಕಿತವನ್ನು ಪಡೆದಿದ್ದರೆಂದು ಶಾಸನಗಳು ದಾಖಲಿಸಿವೆ. ಶೃಂಗೇರಿಯ ಧರ್ಮಗುರುಗಳಿಗೆ ಅವರು ಹೆಚ್ಚಿನ ಭಕ್ತಿಯನ್ನು ತೋರಿದರು. ಕ್ರಿ.ಶ.೧೩೪೬ರಲ್ಲಿ, ಯಶಸ್ವಿಯಾಗಿ ರಾಜ್ಯವನ್ನು ಸ್ಥಾಪಿಸಿದ ನಂತರ, ಐವರು ಸಹೋದರರೂ ಶೃಂಗೇರಿ ಮಠಕ್ಕೆ ಭೇಟಿ ನೀಡಿ, ಧರ್ಮಗುರುಗಳಾದ ವಿದ್ಯಾತೀರ್ಥರಿಗೆ ಪ್ರಣಾಮವನ್ನು ಸಲ್ಲಿಸಿ, ಅವರ ಶಿಷ್ಯರಾದ ಧರ್ಮಗುರು ಭಾರತೀ ತೀರ್ಥ ಹಾಗೂ ಇತರರಿಗೆ ಧಾರಾಳವಾಗಿ ದೇಣಿಗೆಗಳನ್ನು ನೀಡಿದರು. ಆ ಸಮಯದಲ್ಲಿ, ವಿದ್ಯಾರಣ್ಯರು ದೂರದ ವಾರಣಾಸಿಯಲ್ಲಿ ಇದ್ದರು. ಕ್ರಿ.ಶ.೧೩೫೬ರ ನಂತರ ಒಂದನೆಯ ಬುಕ್ಕನ ವಿಶೇಷ ಕೋರಿಕೆಯ ಮೇರೆಗೆ, ವಿದ್ಯಾರಣ್ಯರು ಶೃಂಗೇರಿಗೆ ಬಂದು, ಮಠಾಧಿಪತಿಯಾಗಿ ವಿದ್ಯಾತೀರ್ಥರ ನಂತರ ಸ್ಥಾನವನ್ನು ಅಲಂಕರಿಸಿ, ಕ್ರಿ.ಶ.೧೩೮೬ರವರೆಗೂ ಮುಂದುವರಿದರು. ಅಂದಿನ ಕಾಲದ ಸಮಕಾಲೀನ ವಿಜಯನಗರ ರಾಜರೆಂದರೆ ಒಂದನೆಯ ಬುಕ್ಕ ಹಾಗೂ ಇಮ್ಮಡಿ ಹರಿಹರ.

ಈ ನೂತನ ರಾಜ್ಯದ ರಾಜಧಾನಿಯನ್ನು ವಿಜಯನಗರ ಎಂದು ಕರೆಯಲಾಯಿತು ಹಾಗೂ ಈ ಹೆಸರೇ ರಾಜ್ಯಕ್ಕೂ ಅನ್ವಯಿಸಿ ಗುರುತಿಸಲಾಯಿತು. ಆನೆಗೊಂದಿ, (ಕುಂಜರಕೋಣ ಸಂಸ್ಕೃತ ಸ್ವರೂಪ), ವಿರೂಪಾಕ್ಷಪುರ, ಹೊಸಪಟ್ಟಣ, ಹೊಸ ಹಂಪೆಯಪಟ್ಟಣ, ಹಸ್ತಿನಾವತಿ, ಹಂಪೆಯ ಹಸ್ತಿನಾವತಿ, ವಿದ್ಯಾನಗರ ಮುಂತಾದ ಹಲವಾರು ಹೆಸರುಗಳಿಂದಲೂ ಅದನ್ನು ಉಲ್ಲೇಖಿಸಲಾಗುತ್ತಿತ್ತು. ಏಳನೆಯ ಶತಮಾನದ ತಾಮ್ರ ಫಲಕದಲ್ಲಿ ಪಂಪ–ತೀರ್ಥವೆಂದೂ, ೧೧ನೆಯ ಶತಮಾನದ ಶಿಲಾಶಾಸನದಲ್ಲಿ ಪಂಪಾಪುರವೆಂದೂ ವಿವರಿಸಲಾದ ಪಟ್ಟಣವು, ಸ್ವತಃ ಹಳೆಯ ನಗರವಾಗಿದ್ದು, ಕಲ್ಯಾಣದ ಚಾಳುಕ್ಯರು ಹಾಗೂ ಹೊಯ್ಸಳರ ಆಳ್ವಿಕೆಯ ಅವಧಿಯಲ್ಲಿ ಹೆಸರುವಾಸಿಯಾಗಿತ್ತು. ಹಾಗಾಗಿ, ಹರಿಹರನು ಈ ನಗರವನ್ನು ನಿರ್ಮಾಣ ಮಾಡಿದನೆಂದು ಹೇಳುವುದು ಸರಿಯಾಗಲಾರದು. ಬದಲಾಗಿ, ಅಸ್ತಿತ್ವದಲ್ಲಿರುವ ಪಟ್ಟಣವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡು, ನಂತರ ಅದು ನಗರವಾಗಿ ಬೆಳೆಯಿತು ಎನ್ನುವುದು ಸಮಂಜಸವಾಗಿದೆ. ವಿರೂಪಾಕ್ಷ ದೇವರು ಆರಾಧ್ಯ ದೈವವಾಗಿದ್ದು, 'ಶ್ರೀ ವಿರೂಪಾಕ್ಷ' ಎಂಬ ಕನ್ನಡ ಅಕ್ಷರಗಳ ಕೆತ್ತನೆಯು ಪ್ರಾರಂಭಿಕ ಅರಸರ ಮುದ್ರೆಯಾಯಿತು; ಈ ಪ್ರಾರಂಭಿಕ ಅರಸರು, ರಾಜ್ಯವನ್ನು ದೇವರ ಪ್ರತಿನಿಧಿಗಳಾಗಿ ಆಳುತ್ತಿರುವುದಾಗಿ ಘೋಷಣೆ ಮಾಡಿದರು. ವರಾಹದ ಚಿಹ್ನೆಯನ್ನು ಹೊಂದಿದ್ದ ಅವರ ರಾಜಲಾಂಛನವು ಸಮಕಾಲೀನ ಗೊಂದಲದ ಪರಿಸ್ಥಿತಿಗಳನ್ನು ನಿವಾರಿಸಿ, ಸುವ್ಯವಸ್ಥಿತ ಸರ್ಕಾರವನ್ನು ಸ್ಥಾಪಿಸಿದರೆಂಬುದನ್ನು ಸೂಚಿಸುವಂತೆ ತೋರುತ್ತದೆ. ವರಾಹನ ಅವತಾರದಲ್ಲಿ ಭೂಮಿಯನ್ನು ರಕ್ಷಿಸಿದ ಶ್ರೀ ವಿಷ್ಣುರೂಪದೊಂದಿಗೆ ಇದರ ಸಾಮ್ಯವನ್ನು ಕಾಣಬಹುದು. ಸಂಪೂರ್ಣ ದಕ್ಷಿಣ ಭಾರತದ ಮೇಲಿನ ತಮ್ಮ ಸಾರ್ವಭೌಮತ್ವ, ಹಿಂದೂ ರಾಜಕೀಯ ಚಿಂತನೆ ಹಾಗೂ ಹಿಂದೂ ಸಂಸ್ಥೆಗಳನ್ನು ಪೋಷಿಸುವುದನ್ನು ಸೂಚಿಸುವ ಪೂರ್ವ–ಪಶ್ಚಿಮ–ದಕ್ಷಿಣ–ಸಮುದ್ರಾಧಿಪತಿ ಹಾಗೂ ಹಿಂದೂರಾಯ–ಸುರತ್ರಣ ಎಂಬಿತ್ಯಾದಿ ಬಿರುದುಗಳೂ ಇದನ್ನೇ ಸೂಚಿಸುತ್ತವೆ.

ಕ್ರಿ.ಶ.೧೩೩೬ರಲ್ಲಿ, ಹರಿಹರನು ಬಾರಕೂರಿನಲ್ಲಿ (ಉಡುಪಿ ಜಿಲ್ಲೆ) ಕೋಟೆಯೊಂದನ್ನು ನಿರ್ಮಿಸಿದನು, ಆದರೆ ಈ ಹರಿಹರನ ಗುರುತು ಸ್ವಲ್ಪ ಸಂದೇಹಾಸ್ಪದವಾಗಿದೆ. ಕ್ರಿ.ಶ.೧೩೩೮ರಲ್ಲಿ, ಮುಮ್ಮಡಿ ಬಲ್ಲಾಳನು ಈ ಕೋಟೆಗೆ ಭೇಟಿ ನೀಡಿ, ತನ್ನ ಸಮರ್ಥ ಸೇನಾಧಿಪತಿ ಯ ಚಟುವಟಿಕೆಗಳ ಮೇಲ್ವಿಚಾರಣೆ ಮಾಡಿ, ಮಾರ್ಗದರ್ಶನ ನೀಡಿದ ನಂತರ ಬಹುಶಃ ಆತನು ಹಂಪಿಯಲ್ಲಿ ಕಾಣಿಸಿಕೊಂಡನು. ಕ್ರಿ.ಶ.೧೩೪೦ರಲ್ಲಿ, ನಾಲ್ಕನೆಯ ಹೊಯ್ಸಳ ವಿರೂಪಾಕ್ಷ ಬಲ್ಲಾಳನನ್ನು ಹಂಪಿಯಲ್ಲಿ ರಾಜಕುಮಾರನಾಗಿ ಪಟ್ಟಾಭಿಷೇಕ ಮಾಡಲಾಯಿತು. ಅವರ ನಡುವೆ ಸೌಹಾರ್ದಯುತ ಸಂಬಂಧಗಳು ಇಲ್ಲದಿದ್ದಲ್ಲಿ, ಇದನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಕ್ರಿ.ಶ.೧೩೪೦ರ ವೇಳೆಗೆ, ತುಂಗಭದ್ರೆಯ ದಕ್ಷಿಣಕ್ಕೆ ಇರುವ ಬಹುತೇಕ ಪ್ರದೇಶವನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳುವಲ್ಲಿ ಹರಿಹರನು ಯಶಸ್ವಿಯಾದನು. ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಅಟಕಲಗುಂಡದಲ್ಲಿ ದೊರೆತ ಕ್ರಿ.ಶ.೧೩೩೯ಕ್ಕೆ ಸೇರಿದ ದಾಖಲೆಯೊಂದು ಅವನನ್ನು ಪೂರ್ವ–ಪಶ್ಚಿಮ–ಸಮುದ್ರಾಧಿಪತಿ ಎಂದು ಬಣ್ಣಿಸಿದೆ. ಕ್ರಿ.ಶ.೧೩೪೦ರ ಬಾದಾಮಿಯ ಶಿಲಾಶಾಸನವೊಂದರ ಪ್ರಕಾರ, ಆತನ ಆಣತಿಯ ಮೇರೆಗೆ, ಸಾಮಂತನಾದ ಚಾಮರಸನು ಅಲ್ಲಿ ಕೋಟೆಯನ್ನು

ನಿರ್ಮಿಸಿದನೆಂದು ತಿಳಿದು ಬರುತ್ತದೆ. ಹೊಯ್ಸಳ ರಾಜ್ಯದ ಮಧ್ಯಭಾಗದಲ್ಲಿ ದೊರೆತ ಅದೇ ವರ್ಷದ ದಾಖಲೆಯು, ಉತ್ಪ್ರೇಕ್ಷಾಮಯವಾಗಿ ಆತನನ್ನು ಚತುಃಸಮುದ್ರಾಧಿಪತಿ (ನಾಲ್ಕು ಸಮುದ್ರಗಳ ಒಡೆಯ) ಎಂದು ಬಣ್ಣಿಸಿದೆ.ಅದೇ ವರ್ಷದ ಮತ್ತೊಂದು ಶಾಸನವು, ಅನಂತಪುರದ ಗುತ್ತಿಯು ಆತನ ಭದ್ರಕೋಟೆಗಳಲ್ಲೊಂದಾಗಿತ್ತೆಂದು ತಿಳಿಸುತ್ತದೆ. ಎರಡು ವರ್ಷಗಳ ನಂತರ ಬಲ್ಲಾಳನು ಕಾಲವಾದಾಗ, ಹರಿಹರನು ವಿಜಯನಗರ ರಾಜ್ಯದ ಅಡಿಪಾಯವನ್ನಾಕಿದನು. ಕ್ರಿ.ಶ.೧೩೪೩ರಲ್ಲಿ, ನಾಲ್ವಡಿ ವಿರೂಪಾಕ್ಷ ಬಲ್ಲಾಳನಿಗೆ ಪಟ್ಟಾಭಿಷೇಕ ಮಾಡಲಾಯಿತು, ಆದರೆ ಆತನು ಕ್ರಿ.ಶ.೧೩೪೬ರವರೆಗೆ ಮಾತ್ರ ಬದುಕಿದ್ದನು. ಆ ವರ್ಷವು ಪ್ರಮುಖ ಘಟ್ಟವಾಯಿತು, ಏಕೆಂದರೆ ಹರಿಹರನು ಶೃಂಗೇರಿಗೆ ತೆರಳಿ ತನ್ನ ಧರ್ಮಗುರುಗಳನ್ನು ಭೇಟಿ ಮಾಡಿ ವಿಜಯದ ಸಂಭ್ರಮದ ಅಂಗವಾಗಿ ಗೌರವ ಪ್ರಣಾಮಗಳನ್ನು ಸಲ್ಲಿಸಿದನು.

ನೂತನ ರಾಜ್ಯದ ಆಡಳಿತದಲ್ಲಿ ಹರಿಹರನು ತನ್ನ ಸಹೋದರರನ್ನೂ ತೊಡಗಿಸಿಕೊಂಡನು. ನೆಲ್ಲೂರಿನ ಸುತ್ತಲಿರುವ ಉದಯಗಿರಿ ರಾಜ್ಯವನ್ನು ಕಂಪಣನು ಆಳಿದನು. ಒಂದನೆಯ ಬುಕ್ಕನು ದೋರಸಮುದ್ರದ ಸುತ್ತಲಿದ್ದ ರಾಜ್ಯದ ಭಾಗವನ್ನು ನೋಡಿಕೊಂಡರೆ, ಚಂದ್ರಗುತ್ತಿಯನ್ನು ತನ್ನ ರಾಜಧಾನಿಯಾಗಿ ಹೊಂದಿದ್ದ, ಮಲೆ ರಾಜ್ಯ ಎಂದು ಹೆಸರು ಪಡೆದಿದ್ದ ಪಶ್ಚಿಮ ಕರಾವಳಿಯ ಕೊಂಕಣದ ಸುತ್ತಲಿದ್ದ ಪ್ರದೇಶದ ಆಧಿಪತ್ಯವನ್ನು ಮಾರಪ್ಪನಿಗೆ ವಹಿಸಿದ್ದರು. ಕೋಲಾರದ ಇಂದಿನ ಮುಳಬಾಗಿಲಿನ ಸುತ್ತಲಿದ್ದ ಪ್ರದೇಶದ ಆಡಳಿತವನ್ನು ವಹಿಸಿಕೊಂಡಿದ್ದ ಮುದ್ದಪ್ಪನು ಬೇಗ ಮರಣಹೊಂದಿದನೆಂದು ತೋರುತ್ತದೆ. ದಕ್ಷ ಸಹೋದರರ ನೆರವಿನೊಂದಿಗೆ, ಹರಿಹರನು ಹೊಸ ರಾಜ್ಯದ ಸ್ಥಾಪನೆಯನ್ನು ಮಾಡಿದ್ದಲ್ಲದೇ, ಅದಕ್ಕೆ ಶಾಂತಿ ಹಾಗೂ ಸುಭಿಕ್ಷೆಗಳಿಂದ ತುಂಬಿದ್ದ ಸ್ಥಿರವಾದ ಸರ್ಕಾರವನ್ನೂ ನೀಡಿದನು. ಬಲಿಷ್ಠ ಯೋಧ, ವ್ಯವಸ್ಥಾಪಕನಲ್ಲದೆ, ದೃಢತೆ, ವಿಶಾಲವಾದ ಮನೋಭಾವ ಹಾಗೂ ಉನ್ನತ ಆದರ್ಶಗಳನ್ನು ಹೊಂದಿದ್ದ ಸಮರ್ಥ ಉತ್ತರಾಧಿಕಾರಿಯಾಗಿದ್ದನು. ಶಂಭುವರಾಯ ಹಾಗೂ ಮಧುರೈ ಸುಲ್ತಾನನ ಎರಡು ಸಣ್ಣ ಸಂಸ್ಥಾನಗಳನ್ನು ಹೊರತುಪಡಿಸಿ, ಸಂಪೂರ್ಣ ದಕ್ಷಿಣ ಭಾರತವು ಆತನ ಅಧೀನಕ್ಕೆ ಬಂದಿತು.



ವಿರೂಪಾಕ್ಷ ದೇವಾಲಯ, ಹಂಪಿ

ಆತನ ಆಳ್ವಿಕೆಯ ಅವಧಿಯಲ್ಲಿ, ಅಂದರೆ ಕ್ರಿ.ಶ.೧೩೩೬–೫೬ರ ನಡುವೆ ಅಲ್ಲಾವುದ್ದೀನ್ ಹಸನ್ ಬಹಮನ್ ಶಾಹ್‌ನು ಕ್ರಿ.ಶ.೧೩೪೭ರಲ್ಲಿ ಗುಲ್ಬರ್ಗಾದಲ್ಲಿ ಬಹಮನಿ ಸಾಮ್ರಾಜ್ಯವನ್ನು ಸ್ಥಾಪಿಸಿದನು.ಈ ಮೂಲಕ, ಎರಡೂ ರಾಜ್ಯಗಳ ನಡುವೆ ನಿರಂತರ ಕಾಳಗದ ಯುಗ ಪ್ರಾರಂಭವಾಯಿತು. ಇದರ ನಂತರ ಪ್ರಾರಂಭದ ಮುನ್ನ ಹಾಗೂ ನಂತರದ ಈ ಸರಣಿ ಘಟನಾವಳಿಗಳ ಸ್ವಾರಸ್ಯಕರ ಅಂಶವೆಂದರೆ, ಧಾರ್ಮಿಕ ಹಾಗೂ ಆರ್ಥಿಕ ಪರಿಗಣನೆಗಳ ಆಧಾರದ ಮೇಲೆ ಕಾಳಗಗಳು ಜರುಗಿರುವುದು. ಕೃಷ್ಣಾ ಹಾಗೂ ತುಂಗಭದ್ರೆಯರ ನಡುವಣ ಆಬ್ ಪ್ರದೇಶವು ಅತ್ಯಂತ ಫಲವತ್ತಾದ ಪ್ರದೇಶವಾಗಿದೆ. ಸಂಬಂಧಪಟ್ಟ ರಾಜ್ಯವು ಆ ಪ್ರದೇಶವನ್ನು ಪಡೆದುಕೊಂಡಾಗ ಅದರ ಸಂಪತ್ತು ವೃದ್ಧಿಸುವುದರಿಂದ, ಈ ಎರಡೂ ಶಕ್ತಿಕೇಂದ್ರಗಳ ನಡುವಣ ಕಾಳಗಗಳ ಆಧಾರವಾದದ್ದು ಇದೇ. ಅದು ಧಾರ್ಮಿಕ ಲೇಪವನ್ನು ಪಡೆದು ವಿಜಯನಗರದ ಅರಸರಿಗೆ ಕಳಕಳಿಯ ಗಂಭೀರ ವಿಷಯವಾಯಿತು. ಬಹಮನಿ ಸುಲ್ತಾನರಿಗೆ ಕೇವಲ ರಾಜಕೀಯ ಅಧಿಕಾರದಲ್ಲಿ ಮಾತ್ರ ಆಸಕ್ತಿ ಇರದೆ, ಇಸ್ಲಾಂನ ಹರಡುವಿಕೆಯಲ್ಲಿ ಅತಿಯಾದ ಆಸಕ್ತಿಯನ್ನು ತೋರಿದರು. ಖಡ್ಗವನ್ನು ಹಿಂಬಾಲಿಸಿದ ಧರ್ಮವು, ಈ ಎರಡು ನೆರೆ ರಾಜ್ಯಗಳ ನಡುವಣ ವೈಷಮ್ಯವನ್ನು ಮತ್ತಷ್ಟು ಹೆಚ್ಚಿಸಿ, ಅದು ನಿರಂತರವಾಗಿ ತಲೆತಲಾಂತರ ಗಳವರೆಗೂ ಮುಂದುವರೆಯುವಂತೆ ಮಾಡಿತ್ತು.



ತನ್ನ ಅಣ್ಣನ ನಂತರ ಅಧಿಕಾರಕ್ಕೆ ಬಂದು ಕ್ರಿ.ಶ.೧೩೫೬–೭೭ರವರೆಗೂ ಆಳಿದ ಒಂದನೆಯ ಬುಕ್ಕನು, ಯುದ್ಧಕೌಶಲ್ಯ ಹಾಗೂ ರಾಜಕೀಯಗಳಲ್ಲಿ ಅಪಾರವಾದ ಅನುಭವವಿದ್ದವನು, ಕಾರಣ, ಆತನು ಸಿಂಹಾಸನವನ್ನು ಏರುವ ಒಂದು ದಶಕದ ಮೊದಲಿನಿಂದಲೂ, ಆಡಳಿತದಲ್ಲಿ ನಿಕಟವಾಗಿ ತೊಡಗಿಕೊಂಡಿದ್ದನು. ಅವನು ಎರಡು ಪ್ರಮುಖ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಮೊದಲನೆಯದಾಗಿ, ಉತ್ತರ ಹಾಗೂ ದಕ್ಷಿಣ ಆರ್ಕಾಟ್ ಜಿಲ್ಲೆಗಳ ಚೆಂಗಲ್‌ಪೇಟೆಯ ಸುತ್ತಲಿನ ಪ್ರದೇಶಗಳನ್ನು ಒಳಗೊಂಡ ರಾಜ್ಯವನ್ನು ಆಳುತ್ತಿದ್ದ ರಾಜಗಂಭೀರ ಶಂಭುವರಾಯ ಕುಟುಂಬದ ಮುಖ್ಯಸ್ಥನಾದ ರಾಜಗಂಭೀರ ರಾಜನಾರಾಯಣನ ಹತೋಟಿ ಮೀರಿದ ನಡುವಳಿಕೆ. ಎರಡನೆಯದಾಗಿ, ಮಧುರೈನ ಸುಲ್ತಾನನು ಗಂಭೀರವಾದ ಸಮಸ್ಯೆಗಳನ್ನು ಒಡ್ಡುತ್ತಿದ್ದು ಮಗನಾದ ಕಂಪಣನನ್ನು ಈ ಸಮಸ್ಯೆಗಳನ್ನು ಬಗೆಹರಿಸಲೆಂದು ಬುಕ್ಕನು ನಿಯುಕ್ತಗೊಳಿಸಿದನು. ಉತ್ತರ ಆರ್ಕಾಟ್ ಜಿಲ್ಲೆಯ ಪಡೈವೀಡುವಿನೊಂದಿಗೆ ಗುರುತಿಸಲಾಗುವ ರಾಜಗಂಭೀರಮಲೈ ಕೋಟೆಯನ್ನೂ, ಶಂಭುವರಾಯ ಕುಟುಂಬದ ಮುಖ್ಯಸ್ಥನನ್ನೂ ಸೆರೆಹಿಡಿಯುವ ಮೂಲಕ, ರಾಜಕುಮಾರನು ಮಹಾನ್ ಸೇನಾ ಕೌಶಲ್ಯವನ್ನು ಪ್ರದರ್ಶಿಸಿದನು. ತನ್ನ ಸೇನಾಧಿಪತಿಗಳಾದ ಸಾಳುವ ಮಂಗು ಹಾಗೂ ಗೋಪಣ್ಣರ ದಕ್ಷ ನೆರವಿನೊಂದಿಗೆ, ಮಧುರೈ ಸುಲ್ತಾನನಾದ ಷಮ್ಸುದ್ದೀನ್ ಆದಿಲ್ ಶಾಹ್‌ನ ವಿರುದ್ಧ ಕಂಪಣನು ಮುಂದುವರೆದನು; ಕ್ರಿ.ಶ.೧೩೫೯ರಲ್ಲಿ ಸಾಳುವ ಮಂಗುವಿನೊಡನೆ ನಡೆದ ಸೆಣಸಾಟದಲ್ಲಿ ಸುಲ್ತಾನನು ಕೊಲ್ಲಲ್ಪಟ್ಟನು.

ಆದರೆ, ಮಧುರೈನ ರಾಜ್ಯ ಆತನೊಂದಿಗೆ ಕೊನೆಗೊಳ್ಳದೆ, ಒಂದು ದಶಕಕ್ಕಿಂತ ಅಧಿಕ ಅವಧಿಯವರೆಗೂ ಮುಂದುವರೆಯಿತು, ಏಕೆಂದರೆ, ದೆಹಲಿಯಿಂದ ಫ಼ಕ್ರುದ್ದೀನ್ ಮುಬಾರಕ್ ಶಾಹ್‌ನನ್ನು ಮಧುರೈನ ಸಿಂಹಾಸನದ ಮೇಲೆ ಪ್ರತಿಷ್ಠಾಪಿಸಲಾಯಿತು. ಈ ಸುಲ್ತಾನನ ನಂತರ, ಅಲ್ಲಾವುದ್ದೀನ್ ಸಿಕಂದರ್ ಶಾಹನು ಕ್ರಿ.ಶ.೧೩೭೮ರವರೆಗೂ ಆಳಿದನು; ಆ ವರ್ಷದಲ್ಲಿ ವಿಜಯನಗರದ ಸೈನ್ಯವು ಅವನನ್ನು ಸೆರೆಹಿಡಿದು ಕೊಂದುಹಾಕಿತು. ಅವನೊಂದಿಗೆ ಮಧುರೈ ರಾಜ್ಯವೂ ನಿರ್ನಾಮವಾಯಿತು. ವಿಜಯನಗರದ ರಾಜಪ್ರತಿನಿಧಿಯಾಗಿ ತಮಿಳು ದೇಶವನ್ನು ಆಳಿದ ಕಂಪಣನಿಗೆ ಈ ಸಾಧನೆಯ ಶ್ರೇಯಸ್ಸು ಸಲ್ಲಬೇಕು. ತನ್ನ ಪ್ರಜೆಗಳಲ್ಲಿ ಆತ್ಮವಿಶ್ವಾಸ ಹಾಗೂ ಆತ್ಮಸ್ಥೈರ್ಯವನ್ನು ತುಂಬಿ, ದೇವಾಲಯಗಳಲ್ಲಿ ಧಾರ್ಮಿಕ ಆಚರಣೆಗಳನ್ನು ಪುನರುಜ್ಜೀವನಗೊಳಿಸಿದನು. ನಗರದ ಮಹಮದೀಯ ಸ್ವಾಧೀನತೆಯ ಸಂದರ್ಭದಲ್ಲಿ ಶ್ರೀರಂಗಂನ ರಂಗನಾಥನ ವಿಗ್ರಹವನ್ನು ತಿರುಪತಿಗೆ ಸ್ಥಳಾಂತರಿಸಲಾಗಿತ್ತು, ಅದನ್ನು ಮತ್ತೆ ಶ್ರೀರಂಗಂಗೆ ತಂದು ಮರುಸ್ಥಾಪಿಸಲಾಯಿತು. ಕಂಪಣನ ವಿಜಯಗಳು ತುಂಗಭದ್ರೆಯ ದಕ್ಷಿಣ ಭಾಗದ ದಕ್ಷಿಣ ಪರ್ಯಾಯ ದ್ವೀಪ ದ ಬಹುತೇಕ ಸಂಪೂರ್ಣ ಭಾಗವನ್ನೇ ವಿಜಯನಗರದ ರಾಜ್ಯದ ಆಳ್ವಿಕೆಯ ಅಡಿಗೆ ಬರುವಂತೆ ಮಾಡಿತು. ಮಧುರ ವಿಜಯಮ್ ಅಥವಾ ವೀರಕಂಪಣರಾಯಚರಿತಂ ಎಂಬ ಸಂಸ್ಕೃತದ ಚಾರಿತ್ರಿಕ ಕಾವ್ಯವನ್ನು ಬರೆದ ಆತನ ರಾಣಿಯಾದ ಗಂಗಾದೇವಿಯು, ರಾಜಕುಮಾರನ ಸೇನಾ ಸಾಧನೆಗಳನ್ನು ಸಚಿತ್ರವಾಗಿ ಬಣ್ಣಿಸಿದ್ದಾಳೆ.

ಉತ್ತರದಲ್ಲಿ, ಮುಂದಿನ ಬಹಮನಿ ರಾಜನಾದ ಒಂದನೆಯ ಮಹಮ್ಮದ್ ಶಾಹನನ್ನೂ ಬುಕ್ಕನು ಎದುರಿಸಬೇಕಾಯಿತು. ಈ ಕಾಲದಿಂದ ಮುಂದಕ್ಕೆ, ದೋಆಬ್ ಯುದ್ಧಗಳೆಂದು ನಾಮಾಂಕಿತವಾದ ಸರಣಿ ಯುದ್ಧಗಳು ಎರಡೂ ರಾಜ್ಯಗಳ ನಡುವೆ ಆರಂಭವಾಯಿತು. ಈ ಸಂದರ್ಭದಲ್ಲಿ, ಫ಼ೆರಿಷ್ತಾನಂತಹ ಮುಸಲ್ಮಾನ ಚರಿತ್ರಕಾರರು ಹಾಗೂ ದಾಖಲೆಕಾರರ ವೃತ್ತಾಂತಗಳು ಯಾವಾಗಲೂ ಸುಲ್ತಾನನಿಗೆ ಜಯವಾಯಿತೆಂದು ಘೋಷಿಸಿವೆ. ಆದರೆ ಹಿಂದೂ ಕೈಫ಼ಿಯತ್, ಶಾಸನ ಹಾಗೂ ಇತರ ಆಕರಗಳು ಸಂಪೂರ್ಣವಾಗಿ ಪ್ರತ್ಯೇಕ ಚಿತ್ರಣವನ್ನು ನೀಡುತ್ತವೆಂಬುದು ಸ್ವಾರಸ್ಯಕರವಾದ ಅಂಶ. ಅಷ್ಟೇ ಅಲ್ಲ, ಒಂದನೆಯ ಹರಿಹರನ ಕಾಲದಲ್ಲೂ, ಮೊದಲನೆಯ ಬಹಮನಿ ಸುಲ್ತಾನನಾದ ಅಲ್ಲಾವುದ್ದೀನನು, ಹಿಂದೂ ರಾಜ್ಯವನ್ನು ಭೇದಿಸಿ, ರಾಯಚೂರು ಮುಂತಾದ ಪ್ರದೇಶಗಳನ್ನು ಆಕ್ರಮಿಸಿಕೊಂಡನೆಂದು ಹೇಳಲಾಗುತ್ತದೆ, ಆದರೆ ಹರಿಹರನು ಅದನ್ನು ಪುನಃ ಗೆದ್ದನು. ಬುಕ್ಕನು ತನ್ನನ್ನು ಕಾಪಯನಾಯಕನೊಂದಿಗೆ ಸ್ನೇಹಸಂಧಾನ ಮಾಡಿಕೊಂಡು ನಂತರ, ಆತನ ಮಗನಾದ ವಿನಾಯಕದೇವನು ಮಹಮ್ಮದ್ ಶಾಹನು ಆಕ್ರಮಿತ ಪ್ರದೇಶಗಳನ್ನು ತಮಗೆ ನೀಡಬೇಕೆಂದು ಒತ್ತಾಯಿಸಿದನು. ಆಂಧ್ರ ಮುಖಂಡರೊಡನೆ ಕೈಗೊಂಡ ಈ ಸಂಧಾನವು ಅನೇಕ ಪರಿಣಾಮಗಳಿಗೆ ಎಡೆ ಮಾಡಿಕೊಟ್ಟಿತು. ನೆಲ್ಲೂರಿನ ಸುತ್ತಲಿನ ಉದಯಗಿರಿ ರಾಜ್ಯವನ್ನು ಕಂಪಣನು ಆಳುತ್ತಿದ್ದನು. ಕಂಪಣನ ಮರಣದ ನಂತರ, ಆ ಪ್ರದೇಶದ ಉಸ್ತುವಾರಿಯನ್ನು ಆತನ ಮಗ ಸಾವಣ ಹಾಗೂ ಇಮ್ಮಡಿ ಸಂಗಮರು ವಹಿಸಿಕೊಂಡರು, ಆದರೆ ಅದರಾಚೆಗಿನ ಆಂಧ್ರ ಪ್ರದೇಶವನ್ನು ಬುಕ್ಕನು ನೋಡಿಕೊಳ್ಳುತ್ತಿದ್ದನು.ಬಹಮನಿ ಸುಲ್ತಾನರಿಂದ ವಾರಂಗಲ್‌ನಲ್ಲಿ ಉಂಟಾದ ಭಂಗಗಳ ನಂತರ, ವೇಲಮರು ಆ ಪ್ರದೇಶದ ಅಧಿಕಾರವನ್ನು ವಹಿಸಿಕೊಂಡು, ವಿಜಯನಗರದ ವಿರುದ್ಧ ಪ್ರತಿಕೂಲ ಧೋರಣೆಯನ್ನು ತಳೆದರು. ಗೋದಾವರಿ ಹಾಗೂ ಕೃಷ್ಣಾ ನದಿಗಳ ನಡುವೆ ಕೊಂಡವೀಡು ಹಾಗೂ ರಾಜಮಂಡ್ರಿಯ ಎರಡು ರೆಡ್ಡಿ ಕುಟುಂಬಗಳು ಅಸ್ತಿತ್ವಕ್ಕೆ ಬಂದು, ಕ್ರಮವಾಗಿ ಬಹಮನಿಯರು ಹಾಗೂ ವಿಜಯನಗರದ ಅರಸರೊಂದಿಗೆ ಸ್ನೇಹಪರ ಹಾಗೂ ಶತ್ರುತ್ವದ ಸಂಬಂಧಗಳನ್ನು ಪಡೆದಿದ್ದವು. ಹೀಗೆ, ಈ ಪ್ರದೇಶದಲ್ಲಿ ಮತ್ತೊಂದು ದೃಶ್ಯವು ತೆರೆಕಂಡಿತು. ವಾರಂಗಲ್‌ನ ವಿರುದ್ಧ ಪಡೆದ ವಿಜಯವು, ಮಹಮ್ಮದ್ ಶಾಹನಿಗೆ ಆಕ್ರಮಣಕಾರಿ ನಿಲುವನ್ನು ಕೈಗೊಳ್ಳುವ ಆತ್ಮವಿಶ್ವಾಸವನ್ನು ನೀಡಿತು. ಅದರ ಪರಿಣಾಮವಾಗಿ, ಬುಕ್ಕನಿಂದ ಮುದ್ಗಲ್ಲಿನ ಮೇಲೆ ಶೀಘ್ರ ವಿಜಯವನ್ನು ಸಾಧಿಸಲಾಯಿತು.ಅವನ ಪಾಲಿಗೆ, ಸುಲ್ತಾನನು ಕೃಷ್ಣೆಯನ್ನು ದಾಟಿ, ಮೊದಲ ಬಾರಿಗೆ ಬಂಡಿತೋಪು ಹಾಗೂ ಫ಼ಿರಂಗಿಗಳನ್ನು ಬಳಸಿ, ಆದವಾನಿಯ (ಅದೋನಿ) ಕೋಟೆಯನ್ನು ಪಡೆದುಕೊಂಡನು.ಮುಸಲ್ಮಾನ ಚರಿತ್ರಕಾರರು, ಅದರಲ್ಲೂ ಮುಹಮ್ಮದ್ ಖಾಸಿಮ್ ಫ಼ೆರಿಷ್ತಾನಂತಹವರು, ಸಿರಗುಪ್ಪದ ಬಳಿಯಲ್ಲಿ ತುಂಗಭದ್ರೆಯನ್ನು ದಾಟಿದ ನಂತರ ವಿಜಯನಗರಕ್ಕೆ ಮುನ್ನುಗ್ಗಿದನೆಂದೂ, ಅದರಿಂದ ಅಷ್ಟಾಗಿ ಯಶ ಸಾಧಿಸದೆ ಹಿನ್ನಡೆದನೆಂದೂ ಹೇಳಲಾಗುತ್ತದೆ. ಕ್ರಿ.ಶ.೧೩೭೫ರಲ್ಲಿ ಮುಹಮ್ಮದ್ ಶಾಹನು ಮಡಿದು ಆ ನಂತರ ಸಿಂಹಾಸನವೇರಿದ ಮುಜಾಹಿದನು, ಬುಕ್ಕನಿಗೆ, ಎರಡೂ ರಾಜ್ಯಗಳ ನಡುವೆ ವಿವಾದಾಸ್ಪದವಾದ ರಾಯಚೂರು ದೋಆಬ್ ಇರುವುದರಿಂದ, ತುಂಗಭದ್ರೆಯನ್ನು ಗಡಿಯಾಗಿ ನಿರ್ಧರಿಸಬೇಕೆಂದು ಬರೆದನು.ಮೊದಲಿನಿಂದಲೂ ದೋಆಬ್‌ನಲ್ಲಿದ್ದ ರಾಯಚೂರು ಹಾಗೂ ಮುದ್ಗಲ್‌ನಂತಹ ಪ್ರದೇಶಗಳು ಹಾಗೂ ತುಂಗಭದ್ರೆಯ ಉತ್ತರದಲ್ಲಿದ್ದ ಬಂಕಾಪುರದ ಕೋಟೆಗಳು

ವಾಣಿಜ್ಯ ಪಟ್ಟಣಗಳಾಗಿದ್ದು, ಅವು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ್ದರಿಂದ, ಈ ಸಲಹೆಗೆ ಬುಕ್ಕನು ಒಪ್ಪಲಿಲ್ಲ.ಇದರ ಫಲವಾಗಿ, ಎರಡನೆಯ ಬಹಮನಿ ಯುದ್ಧವು ನಡೆಯಿತು.ಬಹಮನಿ ಸೇನಾಧಿಪತಿಯು ಅದೋನಿಗೆ ಮುತ್ತಿಗೆ ಹಾಕಿದರೆ, ಸುಲ್ತಾನನು ಸ್ವತಃ ವಿಜಯನಗರದ ಮೇಲೆ ಧಾಳಿ ನಡೆಸಲು ಮುನ್ನುಗ್ಗಿದನು. ಬುಕ್ಕನು ತನ್ನ ರಾಜಧಾನಿಯ ಮೇಲೆ ಧಾಳಿ ನಡೆಸಿರುವುದೆಂದು ತಿಳಿದ ಮುಜಾಹಿದನು, ಹಿಂದೆ ಸರಿಯಲು ಪ್ರಾರಂಭಿಸಿದನು, ಆದರೆ ಅವನು ಗುಲ್ಬರ್ಗಾ ತಲಪುವ ಮುನ್ನವೇ, ಕ್ರಿ.ಶ.೧೩೭೮ರಲ್ಲಿ ಹತ್ಯೆಗೀಡಾದನು.ಆದೋನಿಯ ಕೋಟೆಯು ಒಂಭತ್ತು ತಿಂಗಳ ಮುತ್ತಿಗೆಯನ್ನು ತಡೆದುಕೊಂಡಿತು, ಹಾಗೂ ಕೊನೆಯಲ್ಲಿ ಸುಲ್ತಾನನ ಸೈನ್ಯವು ಹಿಂದೆ ಸರಿದು ಮುಂದಿನ ಎರಡು ದಶಕಗಳವರೆಗೂ ಎರಡೂ ರಾಜ್ಯಗಳ ನಡುವೆ ಶಾಂತಿ ನೆಲೆಸಿತ್ತು.

ಗೋವಾ ಜಯದ ಶ್ರೇಯಸ್ಸು, ಬುಕ್ಕನ ಸಹೋದರನಾದ ಮಾರಪ್ಪನಿಗೆ ಸಲ್ಲಬೇಕು.ಮಾರಪ್ಪನ ಮಂತ್ರಿ ಹಾಗೂ ಚಾವುಂಡನ ಮಗನಾದ ಮಾಧವನು ಕೊಂಕಣ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡನು. ಆದಾಗಲೇ ಅಲ್ಲಾವುದ್ದೀನ್ ಬಹಮನ್ ಶಾಹ್‌ನ ಅಧೀನದಲ್ಲಿದ್ದ ಗೋವಾದ ಮೇಲೆ ಧಾಳಿ ನಡೆಸಿ ಕ್ರಿ.ಶ.೧೩೬೬ರಲ್ಲಿ ಕೋಟೆಯನ್ನು ಆಕ್ರಮಿಸಿಕೊಳ್ಳಲಾಯಿತು. ತದನಂತರ ಒಂದು ಶತಮಾನದವರೆವಿಗೂ ವಿಜಯನಗರದ ಅರಸರ ಅಧೀನದಲ್ಲೇ ಮುಂದುವರೆಯಿತು. ಈ ಎಲ್ಲ ಸೇನಾ ಚಟುವಟಿಕೆಗಳ ನಡುವೆ, ಬೃಹತ್ ಬತೇರಿ ಹಾಗೂ ಭವ್ಯ ಕಟ್ಟಡಗಳ ನಿರ್ಮಾಣದ ಮೂಲಕ, ತನ್ನ ರಾಜಧಾನಿಯನ್ನು ವಿಸ್ತರಿಸಿ, ಬಲಪಡಿಸಿಕೊಳ್ಳಲು ಬುಕ್ಕನು ಸಮಯವನ್ನು ಹೊಂಚಿದನು. ಇದು ಒಳನಾಡು ಹಾಗೂ ವಿದೇಶೀ ವ್ಯಾಪಾರ ಹಾಗೂ ಕೃಷಿಗೆ ಕುಮ್ಮಕ್ಕು ನೀಡಿ, ಶ್ರೀಲಂಕಾ ಹಾಗೂ ಚೀನಾದಂತಹ ದೇಶಗಳೊಡನೆ ಸ್ನೇಹಪರ ಸಂಬಂಧಗಳನ್ನು ಸ್ಥಾಪಿಸಿಕೊಳ್ಳಲು ನೆರವಾಯಿತು. ಕ್ರಿ.ಶ.೧೩೪೭ರಲ್ಲಿ ಆತನು ಚೀನಾ ದೇಶಕ್ಕೆ ರಾಯಭಾರಿಯನ್ನು ಕಳುಹಿಸುವುದರ ಜೊತೆಗೆ ವಿಸ್ತೃತ ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸಿದನು.

ವಿಜಯನಗರದ ಸ್ಥಾಪಕರಿಗೆ ಭಾರತೀಯ ಸಂಸ್ಕೃತಿಯ ಸಂರಕ್ಷಣೆ ಹಾಗೂ ಪೋಷಣೆಯು ಮುಖ್ಯವಾಗಿತ್ತು.ವೇದಗಳ ಸಂರಕ್ಷಣೆ ಹಾಗೂ ಜನಪ್ರಿಯಗೊಳಿಸುವಿಕೆಗೆ ಆದ್ಯತೆ ನೀಡಲಾಯಿತು. ಕ್ರಿ.ಶ.೧೩೬೦ರಲ್ಲಿ, ಪ್ರತಿಷ್ಠಿತ ಪಾಂಡಿತ್ಯಪೂರ್ಣ ವಾಗ್ಗೇಯಕಾರರಾದ ಸಾಯಣಾಚಾರ್ಯ ಹಾಗೂ ಮಧ್ವಾಚಾರ್ಯರ ನೇತೃತ್ವದಲ್ಲಿ, ವೇದ ಭಾಷ್ಯಗಳ ಸಂಕಲನದ ಯೋಜನೆಯಾದ ವೇದಾರ್ಥ ಪ್ರಕಾಶದ ಸಂಕಲನ ಕಾರ್ಯವನ್ನು ಬುಕ್ಕನು ಕೈಗೊಂಡನು.ರಾಜನ ಈ ಕಾರ್ಯವು, ಆತನಿಗೆ ವೈದಿಕಮಾರ್ಗ – ಪ್ರವರ್ತಕ ಎಂಬ ಸೂಕ್ತವಾದ ಬಿರುದನ್ನೇ ತಂದುಕೊಟ್ಟಿತು.ಆತನ ಆಳ್ವಿಕೆಯ ಮತ್ತೊಂದು ಗಣನೀಯ ಅಂಶವೆಂದರೆ, ಕೆಲವು ಧಾರ್ಮಿಕ ಆಚರಣೆಗಳ ಕುರಿತಾಗಿ ಭಿನ್ನಮತವಿದ್ದ ಶ್ರೀವೈಷ್ಣವ ಹಾಗೂ ಜೈನರಂತಹ ಎರಡು ವಿಭಿನ್ನ ಮತಗಳ ಅನುಯಾಯಿಗಳ ನಡುವೆ ಸಂಧಾನ ಮಾಡಿಸಿರುವುದು.ಬಹುಸಂಖ್ಯಾತರು, ಅಂದರೆ ಈ ಸಂದರ್ಭದಲ್ಲಿ ಶ್ರೀವೈಷ್ಣವರು, ಅಲ್ಪಸಂಖ್ಯಾತರ ಹಕ್ಕು ಹಾಗೂ ಸವಲತ್ತುಗಳ ರಕ್ಷಣೆಯ ಹೊಣೆಗಾರಿಕೆ ಹೊತ್ತಿರುವುದಾಗಿ, ಕಾನೂನನ್ನು ಜಾರಿಗೆ ತಂದನು.'ಜೈನ ರಾಮಾನುಜ ಪ್ರಶಸ್ತಿ'ಎಂದು ವಿವರಿಸಲಾದ ಈ ರಾಜವಾಂಶಿಕ ಲಕ್ಷಣದ ಹಕ್ಕುಗಳನ್ನು, ರಾಜ್ಯದ ಅಲ್ಪಸಂಖ್ಯಾತರ ಪರವಾಗಿ ನೀಡಲಾಯಿತು.ರಾಜನ ಈ ಕಾರ್ಯನೀತಿಯು, ಎಲ್ಲ ವಿಜಯನಗರ ರಾಜರಿಗೂ ಅನ್ವಯಿಸುವ ಸಾಮಾನ್ಯ ಕಾರ್ಯನೀತಿಯಾಗಿ, ಸಂಕುಚಿತ ಅಡೆತಡೆಗಳನ್ನು ಮೀರಿ, ಮುಸಲ್ಮಾನರು ಹಾಗೂ ಕ್ರಿಶ್ಚಿಯನ್ನರೂ ಸೇರಿದಂತೆ, ಎಲ್ಲಾ ಧರ್ಮ ಹಾಗೂ ಮತಗಳ ಪ್ರಜೆಗಳಿಗೆ ಸಮನಾದ ಹಕ್ಕು ಹಾಗೂ ಪ್ರಯೋಜನಗಳನ್ನು ನೀಡತಕ್ಕದ್ದೆಂಬ ರೂಪರೇಷೆಯನ್ನು ನೀಡಿದ್ದು ಬಾರ್ಬೋಸರಂತಹ ಯಾತ್ರಿಕರು ಇದನ್ನು ನಂತರ ರುಜುವಾತು ಮಾಡಿದ್ದಾರೆ.

ಕ್ರಿ.ಶ.೧೩೭೭–೧೪೦೪ರವರೆಗೆ ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡ ಇಮ್ಮಡಿ ಹರಿಹರನು, ತಾನು ಸಿಂಹಾಸನವನ್ನು ಏರಿದ ತಕ್ಷಣ ಆಂತರಿಕ ದಂಗೆಗಳನ್ನು ಹತ್ತಿಕ್ಕಬೇಕಾಯಿತು. ಕಂಪಣನ ಮರಣಾನಂತರ, ತಮಿಳು ದೇಶದಲ್ಲಿ ಕೇಂದ್ರದ ಅಧಿಕಾರದ ವಿರುದ್ಧ ತುಂಡಿರ ಚೋಳ ಹಾಗೂ ಪಾಂಡ್ಯ ದಂಡಾಧಿಕಾರಿಯು ಮೇಲೆದ್ದರು.ಅವರನ್ನು ಹತ್ತಿಕ್ಕುವ ಕಾರ್ಯವನ್ನು ಇಮ್ಮಡಿ ವಿರೂಪಾಕ್ಷನು ಮಾಡಬೇಕಿತ್ತು.ಅದಾದ ನಂತರ, ರಾಜಕುಮಾರನು ದಕ್ಷಿಣದತ್ತ ಮುನ್ನಡೆದು, ಅಲ್ಲಿ ಐದನೆಯ ಭುವನೈಕಬಾಹುವನ್ನು ಸೋಲಿಸಿ, ಅವನಿಂದ ಕಪ್ಪವನ್ನು ಸಂಗ್ರಹ ಮಾಡಿದನು.ಪಶ್ಚಿಮದ ಕರಾವಳಿಯಲ್ಲಿ, ಕ್ರಿ.ಶ.೧೩೯೫ರಲ್ಲಿ ಬಹಮನಿಗಳಿಂದ ರಂಗಣಿಯಂತಹ ಕೆಲವು ಭದ್ರಕೋಟೆಗಳನ್ನು ರಾಜನ ಸೇನಾಧಿಪತಿಗಳಾದ ವಸಂತಮಾಧವ ಹಾಗೂ ಆತನ ಮಗನಾದ ಬೈಚಪ್ಪರು ಸೆರೆಹಿಡಿದರು. ಫೆರಿಶ್ತನ ಪ್ರಕಾರ, ಕ್ರಿ.ಶ.೧೩೬೮–೬೯ರಿಂದ, ಬಹಮನಿಯ ಸುಲ್ತಾನ್ ಫ಼ಿರೋಜ಼್‌ನ ವಿರುದ್ಧ ಬುಕ್ಕನು ದೊಡ್ಡ ಸೈನ್ಯ ತೆಗೆದುಕೊಂಡು ಹೊರಟನು.ಕುತಂತ್ರದ ಮೂಲಕ, ಸುಲ್ತಾನನ ಆಸ್ಥಾನದವನೊಬ್ಬನು ವಿಜಯನಗರದ ಸೈನ್ಯಕ್ಕೆ ಬಲೆಬೀಸಿ, ತನ್ಮೂಲಕ ಫ಼ಿರೋಜ಼ನು ವಿಜಯವನ್ನು ಸಾಧಿಸುವಂತಾಯಿತು. ರಾಜ್ಯದ ಗಡಿಗಳು ಬದಲಾಗಲಿಲ್ಲ, ಆದರೆ, ಎರಡೂ ಕಡೆಯ ಜೀವ ಸಂಪತ್ತುಗಳು ನಾಶವಾದವು. ಪೂರ್ವ ಕರಾವಳಿಯಲ್ಲಿ, ವೇಲಮರು ಬಹಮನಿ ಸುಲ್ತಾನನೊಡನೆ ಸ್ನೇಹ ಬೆಳೆಸಿಕೊಂಡರು.ಆದರೆ ರಾಜಕುಮಾರನಾದ ದೇವರಾಯನು, ರಾಜಮಂಡ್ರಿಯ ವೇಮಲ (ರೆಡ್ಡಿಗಳು) ಪಕ್ಷವನ್ನು ವಹಿಸಿಕೊಂಡನು. ಅವರ ಮಧ್ಯೆ ಅನೇಕ ಕಾಳಗಗಳು ನಡೆದವು. ಆಗ, ಉದಯಗಿರಿ ರಾಜ್ಯದ ರಾಜ್ಯಪಾಲನಾದ ದೇವರಾಯನಿಂದ ಪಣಗಲ್ ಕೋಟೆಯನ್ನು ಸೆರೆಹಿಡಿಯಲಾಯಿತು. ಶ್ರೀಶೈಲಂ, ತ್ರಿಪುರಾಂತಕಂ, ಅಡ್ಡಂಕಿ, ಮೋಟುಪಳ್ಳಿ ಮೊದಲಾದವುಗಳನ್ನು ದೇವರಾಯನು ರೆಡ್ಡಿಗಳಿಂದ ಕಸಿದುಕೊಳ್ಳುವ ಮೂಲಕ ಅಣವೇಮನ ದುರ್ಬಲ ಉತ್ತರಾಧಿಕಾರಿಗಳ ಪ್ರಯೋಜನವನ್ನು ಪಡೆದುಕೊಂಡನು. ನಂತರ, ಇಮ್ಮಡಿ ಹರಿಹರನು ಕೋಮರಗಿರಿಯ ದಂಡಾಧಿಕಾರಿಯಾದ ಕಾಟಯ ವೇಮನ ಮಗನಾದ ಕಾಟ ಪ್ರಭುವಿನೊಂದಿಗೆ ತನ್ನ ಮಗಳ ವಿವಾಹವನ್ನು ಜರುಗಿಸಿದನು.

ಪ್ರಾಂತಗಳ ರಾಜ್ಯಪಾಲರಾಗಿ ಸ್ವಂತ ಮಕ್ಕಳಾದ ವಿರೂಪಾಕ್ಷ, ದೇವರಾಯ ಹಾಗೂ ಇಮ್ಮಡಿ ಬುಕ್ಕರನ್ನು ನೇಮಕ ಮಾಡುವ ಮೂಲಕ, ರಾಜ್ಯದ ಆಡಳಿತದಲ್ಲಿ ಬೃಹತ್ ಬದಲಾವಣೆಗಳನ್ನು ಮಾಡಿದನು.ರಾಜ್ಯವನ್ನು ಗಣನೀಯವಾಗಿ ವಿಸ್ತರಿಸಲಾಯಿತು.ನದಿಗಳ ನೀರನ್ನು ಬಳಸುವ ಮೂಲಕ, ಕೆರೆಗಳನ್ನು, ನಾಲೆಗಳನ್ನು ಅಗೆಸಿ, ವ್ಯಾಪಾರ ಹಾಗೂ ವಾಣಿಜ್ಯವನ್ನು ಉತ್ತೇಜಿಸುವ ಮೂಲಕ, ಪ್ರಜೆಗಳಿಗೆ ಉತ್ತಮ ಸೌಕರ್ಯವನ್ನು ಒದಗಿಸಲಾಯಿತು.ಪೆನುಕೊಂಡಕ್ಕೆ ನೀರನ್ನು



*ಹೇಮಕೂಟ ದೇವಾಲಯ ಸಂಕೀರ್ಣ, ಹಂಪಿ*

ಸರಬರಾಜು ಮಾಡಲು, ಅಂದಿನ ಜಲಸೂತ್ರಧಾರಿಯೆಂದು ಕರೆಯಲಾಗುವ (ಹೈಡ್ರಾಲಿಕ್ ಇಂಜಿನಿಯರ್) ಸಿಂಗಯ್ಯ ಭಟ್ಟನು ಎಣ್ಣೆ ನದಿಯಿಂದ ನಾಲೆಯೊಂದನ್ನು ಅಗೆಸಿದನು.ಆತನ ಆಳ್ವಿಕೆಯಲ್ಲಿ, ವೇದ ಭಾಷ್ಯಗಳ ಯೋಜನೆಯನ್ನು ಪೂರ್ಣಗೊಳಿಸಲಾಯಿತು.ಈ ಸಾಧನೆಯು ಆತನಿಗೆ ವೈದಿಕಮಾರ್ಗ–ಸ್ಥಾಪನಾಚಾರ್ಯ ಎಂಬ ಬಿರುದನ್ನು ತಂದುಕೊಟ್ಟರೆ, ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಉತ್ತೇಜನವು ಆತನಿಗೆ ಕರ್ನಾಟಕ–ವಿದ್ಯಾವಿಲಾಸ ಎಂಬ ಬಿರುದನ್ನು ನೀಡಿತು.ವಿದ್ಯಾರಣ್ಯರು ಆಧ್ಯಾತ್ಮಿಕ ವ್ಯವಹಾರಗಳಲ್ಲೂ, ಗುರುಗಳಾದ ಕ್ರಿಯಾಶಕ್ತಿ ರಾಜಕೀಯದಲ್ಲೂ ಮಾರ್ಗದರ್ಶನ ನೀಡುವುದನ್ನು ಮುಂದುವರಿಸಿದರು.

ಇಮ್ಮಡಿ ಹರಿಹರನ ಮರಣದ ನಂತರ, ಮೂವರು ಸಹೋದರರಾದ ಇಮ್ಮಡಿ ಬುಕ್ಕ, ಇಮ್ಮಡಿ ವಿರೂಪಾಕ್ಷ ಹಾಗೂ ಒಂದನೆಯ ದೇವರಾಯನ ನಡುವೆ ಉತ್ತರಾಧಿಕಾರತ್ವಕ್ಕಾಗಿ ವಿವಾದ ಎದ್ದಿತು. ಇದು ಮೂರು ವರ್ಷಗಳ ಕಾಲ ಮುಂದುವರಿದು ಕೊನೆಯದಾಗಿ ಒಂದನೆಯ ದೇವರಾಯನು ಸಿಂಹಾಸನವನ್ನು ಏರಿ, ಕ್ರಿ.ಶ.೧೪೦೬–೨೨ರವರೆಗೂ ಆಳಿದನು.ಅರಮನೆಯಲ್ಲಿ ನಡೆಯುತ್ತಿದ್ದ ಕುತಂತ್ರಗಳು ವಿಜಯನಗರದ ಮೇಲೆ ಧಾಳಿ ನಡೆಸಲು ಫಿರೋಜ್ ಶಾಹನಿಗೆ ಉತ್ತೇಜನ ನೀಡಿದವು.ಬಹಮನಿಯರಿಂದ ನೆರವು ಪಡೆದ ವೇಲಮರು, ಉದಯಗಿರಿಯ ಪ್ರಾಂತದ ಮೇಲೆ ಧಾಳಿ ನಡೆಸಿದರು. ಆದರೆ ಅವರನ್ನು ಹೊಡೆದೋಡಿಸಲಾಯಿತು. ರಾಜಮಂಡ್ರಿಯ ರೆಡ್ಡಿ ರಾಜ್ಯಕ್ಕೆ ನೆರವು ನೀಡಿ ರಾಜತಾಂತ್ರಿಕತೆ ಬಲಪಡಿಸುವ  ಮೂಲಕ ಒಂದೆಡೆ ಬಹಮನಿಯರ ವಿರುದ್ಧ ಹಾಗೂ ಬೇರೊಂದೆಡೆ ಕಳಿಂಗದ (ಒರಿಸ್ಸಾ) ಗಜಪತಿಯ ವಿರುದ್ಧ ಒಂದು ತಡೆಯಾಗಿ ಪ್ರವರ್ತಿಸುವುದೆಂದು ದೇವರಾಯನು ನಂಬಿದನು. ಕೃಷ್ಣ–ಗೋದಾವರಿ ಪ್ರದೇಶಗಳಲ್ಲಿ, ಕಾಟಯ ವೇಮನನ ಅಧೀನದಲ್ಲಿದ್ದ ರಾಜಮಂಡ್ರಿಯ ಮೇಲೆ ಪೆದ್ದ ಕೋಮಟಿ ವೇಮನು ಧಾಳಿ ನಡೆಸಿದನು. ಬಹಮನಿಯರಿಂದ ಪೆದ್ದ ಕೋಮಟಿಗೆ ನೆರವು ದೊರೆತು, ನಂತರ ನಡೆದ ಮುಖಾಮುಖಿಯಲ್ಲಿ, ಕಾಟಯ ವರ್ಮನು ಮಡಿದನು.ಆತನ ದಂಡಾಧಿಕಾರಿಯಾದ ಅಲ್ಲಾಡನ ಸಮಯೋಚಿತ ಕ್ರಮದಿಂದ, ಕ್ರಿ.ಶ.೧೪೧೫ರಲ್ಲಿ ಆತನ ವೈರಿಯ ವಿರುದ್ಧ ಯಶಸ್ವಿಯಾದನು. ಆದರೆ, ಕ್ರಿ.ಶ.೧೪೧೭–೧೯ರ ನಡುವೆ ಬಹಮನಿಯರ ವಿರುದ್ಧ ಪಣಗಲ್‌ನಲ್ಲಿ ಜರುಗಿದ ಮತ್ತೊಂದು ಯುದ್ಧವೂ ನಿರುಪಯುಕ್ತವಾಯಿತು.

ತೆಲಂಗಾಣ ಹಾಗೂ ಆಂಧ್ರದ ಪೂರ್ವ ಕರಾವಳಿಗಳ ಮೇಲೆ ವಿಜಯನಗರದ ಸಾಮ್ಯವನ್ನು ವಿಸ್ತರಿಸಿದ ಶ್ರೇಯಸ್ಸು, ದೇವರಾಯನಿಗೆ ಸೇರಿದ್ದು. ಅರೇಬಿಯಾ ಹಾಗೂ ಪರ್ಶಿಯಾದಿಂದ ಬೃಹತ್ ಸಂಖ್ಯೆಯಲ್ಲಿ ಕುದುರೆಗಳನ್ನು ಆಮದು ಮಾಡಿಕೊಳ್ಳುವ ಮೂಲಕ ಸೈನ್ಯವನ್ನು ಬಲಪಡಿಸಿ, ಅಶ್ವಪಡೆಯನ್ನು ವ್ಯವಸ್ಥಿತಗೊಳಿಸಿದನು. ತನ್ನ ಬಿಲ್ಲುಗಾರರಿಗೆ ತರಬೇತಿ ನೀಡಲು, ತುರ್ಕಿ ಕುಲದ ಕೌಶಲ್ಯಪೂರ್ಣ ಬಿಲ್ಲುಗಾರರನ್ನೂ ನೇಮಕ ಮಾಡಿಕೊಂಡನು. ರಾಜಧಾನಿಯನ್ನು ಬಲಪಡಿಸಿ ಸುಂದರಗೊಳಿಸಿ ತುಂಗಭದ್ರೆಯ ಮೇಲೆ ದೊಡ್ಡ ಅಣೆಕಟ್ಟನ್ನು ಕಟ್ಟಿ, ನದಿಯಿಂದ ನಗರದವರೆಗೂ ೧೫ ಮೈಲಿ ಉದ್ದದ ತೂಗು ನಾಲೆಯನ್ನು ನಿರ್ಮಿಸುವ ಮೂಲಕ ನೀರು ಸರಬರಾಜು ಆಗುವಂತೆ



ಕೇದಾರೇಶ್ವರ ದೇವಾಲಯ, ಹಳೇಬೀಡು, ಹಾಸನ ಜಿಲ್ಲೆ

ಈಶ್ವರ ದೇವಾಲಯ ಅರಸೀಕೆರೆ, ಹಾಸನ ಜಿಲ್ಲೆ



ಕೇಶವ ದೇವಾಲಯ, ಸೋಮನಾಥಪುರ, ಮೈಸೂರು ಜಿಲ್ಲೆ





ಲಕ್ಷ್ಮೀನಾರಾಯಣ ದೇವಾಲಯ, ಹೊಸಹೊಳಲು ಮಂಡ್ಯ ಜಿಲ್ಲೆ

ದೃಢಪಡಿಸಿಕೊಂಡನು. ಹರಿಹರದ ಹತ್ತಿರವಿರುವ ಹರಿದ್ರಾ ನದಿಯ ಮೇಲೂ ಮತ್ತೊಂದು ಅಣೆಕಟ್ಟನ್ನು ನಿರ್ಮಿಸಿದನು. ಕಲಿಕೆ ಹಾಗೂ ಸಾಹಿತ್ಯಕ್ಕೆ ಆತನು ಕುಮ್ಮಕ್ಕು ನೀಡಿದನು.

ದೇವರಾಯನ ನಂತರ ಆತನ ಮಗನಾದ ವೀರ ವಿಜಯರಾಯನು ಕ್ರಿ.ಶ.೧೪೨೪ರವರೆಗೆ, ಕೇವಲ ಎರಡು ವರ್ಷಗಳ ಕಾಲ ಮಾತ್ರ ಆಳಿದನು.ಇದಾದ ನಂತರ, ಪ್ರೌಢದೇವರಾಯ, ಅಭಿನವ ವೀರದೇವರಾಯ ಹಾಗೂ ಪ್ರತಾಪ ದೇವರಾಯ ಎಂದೂ ಕರೆಯಲ್ಪಡುವ ಆತನ ಮಗನಾದ ಇಮ್ಮಡಿ ದೇವರಾಯನು ಸಿಂಹಾಸನವನ್ನು ಏರಿ ಕ್ರಿ.ಶ.೧೪೨೬–೪೬ರವರೆಗೂ ಎರಡು ದಶಕಗಳಿಗೂ ಹೆಚ್ಚಿನ ಕಾಲದವರೆವಿಗೂ ಆಳಿದ್ದು ಗಜವೆಂಟೆಕಾರ (ಆನೆಗಳ ಬೇಟೆಗಾರ) ಎಂಬ ಬಿರುದಿನಿಂದ ಆತನನ್ನು ಹೊಗಳಲಾಗಿದೆ.

ತನ್ನ ದೀರ್ಘ ಆಳ್ವಿಕೆಯಲ್ಲಿ, ಇಮ್ಮಡಿ ದೇವರಾಯನು ಮೂರು ಬಾರಿ ಬಹಮನಿಯರ ವಿರುದ್ಧ ಹೋರಾಡಿದನು.ಆತನಿನ್ನೂ ರಾಜಕುಮಾರನಾಗಿದ್ದಾಗಲೇ, ಕ್ರಿ.ಶ.೧೪೨೨–೨೩ರಲ್ಲಿ ಯುದ್ಧಕ್ಕೆ ತೆರಳಿ ಅಂದಿನ ಸುಲ್ತಾನನಾದ ಒಂದನೆಯ ಅಹಮದ್ ಶಾಹನು ಫಿರೋಜ಼ನಿಗಾದ ಅವಮಾನಕ್ಕೆ ಸೇಡು ತೀರಿಸಿಕೊಳ್ಳಲು, ವಿಜಯನಗರದ ವಿರುದ್ಧ ಸೈನ್ಯವನ್ನು ತೆಗೆದುಕೊಂಡು ಹೊರಟನು.ಫೆರಿಷ್ತಾ ಹಾಗೂ ಇತರ ಬರಹಗಾರರು ಇದನ್ನು ಕುರಿತು ಏನೇ ಬರೆಯಲಿ, ಉಭಯ ಪಕ್ಷಗಳು ಜನ ಹಾಗೂ ಧನ ಹಾನಿಯನ್ನನುಭವಿಸಿದರೂ, ಇಬ್ಬರೂ ವಿಜಯಿಗಳದೆವೆಂದು ಹೇಳಿಕೊಂಡಿದ್ದಾರೆ. ಬಹಮನಿ ಸುಲ್ತಾನನು ಕ್ರಿ.ಶ.೧೪೨೪ರಲ್ಲಿ ಗುಲ್ಬರ್ಗಾದಿಂದ ಬೀದರ್‌ಗೆ ರಾಜಧಾನಿಯನ್ನು ಸ್ಥಳಾಂತರಿಸಿದನು. ಅದು ರಾಜ್ಯದ ನಡು ಮಧ್ಯಭಾಗದಲ್ಲಿ ಇರುವುದಾಗಿ ಹೇಳಿದರೂ, ವಾಸ್ತವದಲ್ಲಿ ಉತ್ತರಕ್ಕೆ ಇದ್ದ ಗುಡ್ಡಗಾಡು ಪ್ರದೇಶಕ್ಕೆ, ವಿಜಯನಗರ ಸಾಮ್ರಾಜ್ಯದಿಂದ ಮತ್ತಷ್ಟು ದೂರವೆಂಬ ಕಾರಣಕ್ಕಾಗಿ ವರ್ಗಾಯಿಸಲಾಯಿತು.ಬಾಕಿಯನ್ನು ತೀರಿಸಿದ್ದರೆಂದು ಹೇಳಿಕೊಂಡರೂ, ವಿಜಯನಗರವು ಬಲಿಷ್ಠವಾಗಿಯೇ ಉಳಿಯಿತು.ಎರಡನೆಯ ಹಾಗೂ ಮೂರನೆಯ ಯುದ್ಧಗಳಲ್ಲಿ, ಅಂದರೆ ಕ್ರಿ.ಶ.೧೪೩೫–೩೬ ಹಾಗೂ ಕ್ರಿ.ಶ.೧೪೪೩ರಲ್ಲಿ, ಮುಂದಿನ ಬಹಮನಿ ಸುಲ್ತಾನನಾದ ಇಮ್ಮಡಿ ಅಲ್ಲಾವುದ್ದೀನ್ ಅಹಮದ್‌ನನ್ನು ದೇವರಾಯನು ಎದುರಿಸಬೇಕಾಯಿತು.ಯುದ್ಧಗಳಿಗೆ ತಕ್ಷಣದ ಕಾರಣಗಳೆಂದರೆ ಮುದ್ಗಲ್ ಹಾಗೂ ರಾಯಚೂರಿನ ಕೋಟೆಗಳ ಸೆರೆಹಿಡಿಯುವುದಾಗಿತ್ತು.ಅಷ್ಟೇ ಏಕೆ, ಈ ಅವಧಿಯಲ್ಲಿ, ಈ ಸ್ಥಳಗಳು ಒಬ್ಬರಿಂದ ಒಬ್ಬರಿಗೆ ಎಷ್ಟು ಶೀಘ್ರವಾಗಿ ಹಸ್ತಾಂತರಗೊಳ್ಳುತ್ತಿತೆಂದರೆ, ಯಾವುದೇ ವರ್ಷ ಅಥವಾ ತಿಂಗಳಿನಲ್ಲಿ ಅದು ಯಾರ ನಿಯಂತ್ರಣದಲ್ಲಿತ್ತು ಎಂದು ಹೇಳಲು ಬರುತ್ತಿರಲಿಲ್ಲ.ಶಿಲಾಶಾಸನಗಳಲ್ಲಿ ಸಾಬೀತುಪಡಿಸಿರುವಂತೆ, ಕ್ರಿ.ಶ.೧೪೩೫ರಲ್ಲಿ, ವಿಜಯನಗರದ ಅಧಿಕಾರಿಯಾದ ವರದನಾಯಕನು, ಮುದ್ಗಲ್‌ನ ಸುತ್ತಲಿನ ಪ್ರದೇಶವನ್ನು ಆಳುತ್ತಿದ್ದನು. ಕಪ್ಪಕಾಣಿಕೆಯನ್ನು ಸಂಗ್ರಹಣೆ ಮಾಡುವ ನೆಪದಲ್ಲಿ, ಸುಲ್ತಾನನು ಯುದ್ಧಕ್ಕೆ ಸಜ್ಜುಗೊಳಿಸುವ ಚಿಂತನೆಯನ್ನು ಮಾಡುತ್ತಿದ್ದನು.ರಾಜನ ಹತ್ಯೆಯ ಯತ್ನವನ್ನು ಮಾಡಿದಾಗ, ವಿಜಯನಗರ ರಾಜಧಾನಿಯಲ್ಲಿ ಸಂಭವಿಸಿದ ಅರಮನೆಯ ದಂಗೆಯ ಉಪಯೋಗವನ್ನು ಪಡೆದುಕೊಳ್ಳಲು ಬಯಸಿದನು.

ಈಶಾನ್ಯ ಕರಾವಳಿ ಪ್ರದೇಶದಲ್ಲಿ, ಗಜಪತಿಯ ರಾಜನಾದ ಭಾನುದೇವನು, ತನ್ನ ಕಾರ್ಯನೀತಿಯ ವಿಸ್ತರಣೆಯ ಭಾಗವಾಗಿ, ವೇಲಮರ ನೆರವಿನೊಂದಿಗೆ, ರಾಜಮಂಡ್ರಿಯ ಮೇಲೆ ಧಾಳಿ ಮಾಡಿ, ಕೊಂಡ್ಯವೀಡಿನವರೆಗೂ ಮುನ್ನುಗ್ಗಿ, ಅದನ್ನು ಕ್ರಿ.ಶ.೧೪೨೭ರಲ್ಲಿ ಗೆದ್ದನು.ರಾಜಮಂಡ್ರಿಯ ದಂಡಾಧಿಕಾರಿಯ ರಕ್ಷಣೆಗೆ ಮುನ್ನುಗ್ಗಿದ ಇಮ್ಮಡಿ ದೇವರಾಯನು, ಕೊಂಡವೀಡನ್ನು ಮತ್ತೆ ಗೆದ್ದು ಸ್ವಾಧೀನಪಡಿಸಿಕೊಂಡು, ರಾಜಮಂಡ್ರಿಯನ್ನು ಮುಕ್ತಗೊಳಿಸಿದನು.ಕ್ರಿ.ಶ.೧೪೩೬ರಲ್ಲಿ, ಪುನಃ ಗಜಪತಿ, ನಾಲ್ವಡಿ ಭಾನುದೇವನ ಉತ್ತರಾಧಿಕಾರಿಯಾದ ಕಪಿಲೇಂದ್ರನು ರಾಜಮಂಡ್ರಿಯ ಮೇಲೆ ಧಾಳಿ ಮಾಡಿದರೂ, ಕ್ರಿ.ಶ.೧೪೩೬ರಲ್ಲಿ ಇಮ್ಮಡಿ ದೇವರಾಯನಿಂದ ನೆರವನ್ನು ಪಡೆದ ರೆಡ್ಡಿಗಳು ಪ್ರಬಲ ವಿರೋಧವನ್ನು ನೀಡಿದ್ದರಿಂದ, ಏನನ್ನೂ ಸಾಧಿಸಲು ಆಗಲಿಲ್ಲ.ಆತನ ಆಳ್ವಿಕೆಯಲ್ಲಿ, ಮೂರನೆಯ ಬಾರಿಗೆ, ಕ್ರಿ.ಶ.೧೪೪೩ರಲ್ಲಿ ರಾಜಮಂಡ್ರಿಯತ್ತ ದೇವರಾಯನು ಇಮ್ಮಡಿ ತನ್ನ ಸೈನ್ಯವನ್ನು ತಿರುಗಿಸಿದನು. ವೇಲಮರೊಂದಿಗೆ ಮೈತ್ರಿಸಂಧಾನ ಮಾಡಿಕೊಂಡ ಕಪಿಲೇಂದ್ರನು ಪುನಃ ದಾಳಿ ನಡೆಸಲು ಮುನ್ನುಗ್ಗಿದನು.ಕಪಿಲೇಂದ್ರನನ್ನು ಹಿಮ್ಮೆಟ್ಟಿಸಿ ಅವರ ಪ್ರದೇಶದಲ್ಲಿ ರೆಡ್ಡಿಗಳನ್ನು ದೃಢವಾಗಿ ಸ್ಥಾಪಿಸಲಾಯಿತು.

ತನ್ನ ನೆರೆಯ ದಕ್ಷಿಣ ರಾಜ್ಯದವರ ಚಟುವಟಿಕೆಗಳನ್ನು ನಿಯಂತ್ರಿಸಲು ಹಾಗೂ ದೂರದ ಗಡಿ ಪ್ರದೇಶವನ್ನು ರಕ್ಷಿಸಿ ನೆಪಮಾತ್ರದ ಕಪ್ಪವನ್ನು ಸಂಗ್ರಹಿಸುವ ಮೂಲಕ ಸಾರ್ವಭೌಮತ್ವವನ್ನು ಸಾಬೀತುಪಡಿಸಲು, ಸಿಲೋನ್‌ನ ವಿರುದ್ಧ ಲಕ್ಕಣ್ಣ ದಂಡೇಶನ ಮುಂದಾಳತ್ವದಲ್ಲಿ ದೇವರಾಯನು ನೌಕಾ ದಂಡಯಾತ್ರೆಯನ್ನು ಕಳುಹಿಸಿದನು.ಇದು ಯಶಸ್ವಿಯಾಗಿ ಲಕ್ಕಣ್ಣನಿಗೆ ದಕ್ಷಿಣ–ಸಮುದ್ರಾಧೀಶ್ವರನೆಂಬ ಬಿರುದು ನೀಡಿ ಗೌರವಿಸಲಾಯಿತು.

ಯಾತ್ರಿಕನಾದ ನೂನಿಝ಼ನು ಹೇಳಿರುವ ಕ್ವಿಲಾನ್ (ಕೇರಳ), ಸಿಲೋನ್, ಪುಲ್ಲಿಕಾಟ್ (ಮದ್ರಾಸ್‌ನ ಬಳಿ), ಪೆಗು, ತೆನ್ನಾಸ್ಸೆರಿಮ್ (ಬರ್ಮಾ) ಹಾಗೂ ಇತರ ದೇಶಗಳು ಇಮ್ಮಡಿ ದೇವರಾಯನಿಗೆ ಕಪ್ಪವನ್ನು ಸಲ್ಲಿಸುತ್ತಿದ್ದವೆಂದರೆ, ಈ ರಾಜನ ಸೇನಾ ಸಾಧನೆಗಳ ಬಗ್ಗೆ ಊಹಿಸಿಕೊಳ್ಳಬಹುದು. ರಾಜ್ಯದಲ್ಲಿ ತುಂಬಿ–ತುಳುಕುತ್ತಿದ್ದ ಜನಸಂಖ್ಯೆಯು ಶಾಂತಿಯುತವಾಗಿದ್ದು, ಪ್ರಜೆಗಳು ತೃಪ್ತಿಯಿಂದಿದ್ದು, ಸೌಹಾರ್ದಯುತ ವಾತಾವರಣವಿದ್ದಿತು. ಕೃಷಿ ಹಾಗೂ ವಾಣಿಜ್ಯಗಳು ವೃದ್ಧಿಯಾದವು.ತನ್ನ ಸೈನ್ಯದಲ್ಲಿ ದೇವರಾಯನು ಹಲವಾರು ಮುಸಲ್ಮಾನರನ್ನು ನೇಮಕ ಮಾಡಿಕೊಂಡಿದ್ದನು.ಇಸ್ಲಾಂ ಧರ್ಮದ ಅನುಯಾಯಿಗಳ ಧಾರ್ಮಿಕ ನಂಬಿಕೆಗಳಿಗೆ ಮನ್ನಣೆ ನೀಡುವ ಸಲುವಾಗಿ, ವಾಡಿಕೆಯ ಪ್ರಕಾರ ಕಿರೀಟದ ಎದುರು ತಲೆ ಬಾಗಬೇಕಿದ್ದ ಅವರಿಗಾಗಿ, ತನ್ನ ಸಿಂಹಾಸನದ ಬದಿಯಲ್ಲಿ ಪವಿತ್ರ ಕುರಾನಿನ ಪ್ರತಿಯನ್ನು ಇರಿಸಿದ್ದನೆಂದು ಫೆರಿಷ್ತಾ ಹೇಳಿದ್ದಾನೆ.

ಆತನ ಆಸ್ಥಾನವು ವಿದ್ವಾಂಸರು, ಕವಿಗಳು, ಕಲಾವಿದರು ಹಾಗೂ ರಾಯಭಾರಿಗಳ ಭೇಟಿಯ ತಾಣವಾಗಿತ್ತು. ಸ್ವತಃ ತಾನೆ ವಿದ್ವಾಂಸನಾದ ಇಮ್ಮಡಿ ದೇವರಾಯನು, ಕವಿಗಳು ಹಾಗೂ ಲೇಖಕರಿಗೆ ಆಶ್ರಯದಾತನಾಗಿದ್ದನು. ಚಾಮರಸ ಹಾಗೂ ಕುಮಾರ ವ್ಯಾಸರಂತಹ ಕನ್ನಡದ ಕವಿಗಳು, ಹಾಗೂ ಕನಕಾಭಿಷೇಕದೊಂದಿಗೆ ಗೌರವಿಸಲಾಗಿತ್ತೆಂದು ನಂಬಲಾದ ತೆಲುಗು ಕವಿ

ಶ್ರೀನಾಥನು ಈ ಕಾಲದಲ್ಲಿದ್ದರು.ಕ್ರಿ.ಶ.೧೪೪೩ರಲ್ಲಿ ಇಮ್ಮಡಿ ದೇವರಾಯನು ಆಸ್ಥಾನಕ್ಕೆ ಭೇಟಿ ನೀಡಿದ್ದ ಪರ್ಶಿಯನ್ ರಾಯಭಾರಿಯಾದ ಅಬ್ದುಲ್ ರಜ್ಞಾಕನ ಪ್ರಕಾರ, ತನ್ನ ಕಣ್ಣುಗಳು ಬೇರೆಲ್ಲೂ ಈ ರೀತಿಯ ವಿಜಯನಗರ ನಗರವನ್ನು ನೋಡಿಲ್ಲವೆಂದು ವರ್ಣಿಸಿದ್ದಾನೆ.

ಇಮ್ಮಡಿ ದೇವರಾಯನ ಮರಣದ ನಂತರದ ನಾಲ್ಕು ದಶಕಗಳು, ದೌರ್ಭಾಗ್ಯ ಹಾಗೂ ಆಪತ್ತುಗಳಿಂದ ತುಂಬಿತ್ತು.ಇಮ್ಮಡಿ ದೇವರಾಯನ ಮಗನಾದ, ಕ್ರಿ.ಶ.೧೪೪೬–೬೫ರವರೆಗೂ ಆಳಿದ ಮಲ್ಲಿಕಾರ್ಜುನ ಹಾಗೂ ಕ್ರಿ.ಶ.೧೪೬೫–೮೫ರವರೆಗೆ ಆಳಿದ ದೇವರಾಯನ ತಮ್ಮನ ಮಗನಾದ ಪ್ರತಾಪದೇವನ ಮಗನಾದ ಮುಮ್ಮಡಿ ವಿರೂಪಾಕ್ಷರಿಬ್ಬರೂ ದುರ್ಬಲ ದೊರೆಗಳಾಗಿದ್ದರೂ, ತಮ್ಮ ರಾಜ್ಯವನ್ನು ಅವರು ಒಟ್ಟಾಗಿ ಹಿಡಿದಿಡಲು ಆಗಲಿಲ್ಲ. ಕ್ರಿ.ಶ.೧೪೫೦ರಲ್ಲಿ ನಡೆದ ಬಹಮನಿ ಹಾಗೂ ಗಜಪತಿ ಸೈನ್ಯಗಳ ಏಕಕಾಲಿಕ ಧಾಳಿಗಳನ್ನು ಬಹಳ ಪ್ರಯಾಸದಿಂದ ಹತ್ತಿಕ್ಕಲಾಯಿತು. ಅದರ ನಂತರ, ರಾಜಮಂಡ್ರಿಯ ರೆಡ್ಡಿಗಳ ರಾಜ್ಯವನ್ನು ಕಪಿಲೇಂದ್ರ ಗಜಪತಿಯು ತೆಗೆದುಕೊಂಡು, ಕೊಂಡವೀಡು ಪ್ರಾಂತವನ್ನು ಅಧೀನಪಡಿಸಿಕೊಂಡು ಕ್ರಿ.ಶ.೧೪೫೪ರಲ್ಲಿ ವಿನುಕೊಂಡದಂತಹ ಕೋಟೆಗಳನ್ನು ವಶಪಡಿಸಿಕೊಂಡನು. ಕ್ರಿ.ಶ.೧೪೬೩ರ ವೇಳೆಗೆ, ಕಪಿಲೇಂದ್ರನ ಮಗನಾದ ಹಮ್ಮೀರನು, ಬಹುಪಾಲು ಯಾವುದೇ ವಿರೋಧವಿಲ್ಲದೆ, ತನ್ನ ಸೈನ್ಯದೊಡನೆ ದಕ್ಷಿಣದಲ್ಲಿ ಕಾವೇರಿಯವರೆಗೂ ಉದಯಗಿರಿ, ಚಂದ್ರಗಿರಿ, ಕಂಚಿ ಹಾಗೂ ಇತರ ಕೋಟೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡ ನಂತರ ಅವನು ಹಿನ್ನಡೆಯಬೇಕಾಯಿತಾದರೂ ಉದಯಗಿರಿ ಹಾಗೂ ಕೊಂಡವೀಡುಗಳು ಆತನ ನಿಯಂತ್ರಣದಲ್ಲೇ ಉಳಿದವು.

ಕ್ರಿ.ಶ.೧೪೬೫ರಲ್ಲಿ ನಡೆದ ಅರಮನೆಯ ಕುತಂತ್ರಗಳ ಕಾರಣದಿಂದ, ಮುಮ್ಮಡಿ ವಿರೂಪಾಕ್ಷನು ಸಿಂಹಾಸನವನ್ನು ಕಳೆದುಕೊಂಡು ಕ್ರಿ.ಶ.೧೪೮೨ರಲ್ಲಿ ತನ್ನ ಮರಣದವರೆಗೂ ಮಲ್ಲಿಕಾರ್ಜುನನು ವನವಾಸದಲ್ಲೇ ಉಳಿದನು.ಹೊಸ ರಾಜನೂ ಅವನಿಗಿಂತ ಭಿನ್ನವಾಗೇನೂ ಇರಲಿಲ್ಲ.ತನ್ನ ಚೈತನ್ಯಪೂರ್ಣ ಪ್ರಧಾನ ಮಂತ್ರಿಯಾದ ಮಹಮದ್ ಗವಾನನ ನೇತೃತ್ವದಲ್ಲಿ ಬಹಮನಿ ಸೈನ್ಯವು, ಪಶ್ಚಿಮ ಕರಾವಳಿಗೆ ನುಗ್ಗಿ, ಗೋವಾ, ಬೆಳಗಾವಿಗಳೂ ಸೇರಿದಂತೆ, ಉತ್ತರ ಕೊಂಕಣವನ್ನು ಸದೆಬಡಿದನು.

ವಿಜಯನಗರದ ಅದೃಷ್ಟವೆಂಬಂತೆ, ಸಾಳ್ವ ಮನೆತನದ, ರಾಜ್ಯದ ನಿಷ್ಠಾವಂತ ಅಧಿಕಾರಿಯಾದ ನರಸಿಂಹನು ಕ್ರಿ.ಶ.೧೪೮೬ರಿಂದ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತೆಗೆದುಕೊಂಡನು.ಆತನ ಸೇನಾಧಿಪತಿಯಾದ ನರಸ ನಾಯಕನ ನೆರವಿನೊಂದಿಗೆ, ಕಳೆದು ಹೋದ ಪ್ರದೇಶಗಳನ್ನು ಗೆಲ್ಲಲು ಪ್ರಾರಂಭಿಸಿ, ದಂಗೆಕೋರರನ್ನು ಸದೆಬಡಿದು ಕಾನೂನುಬದ್ಧ ಸಾರ್ವಭೌಮನಾದನು.ತನ್ನೆಲ್ಲ ಪ್ರಜೆಗಳ ಪ್ರೀತಿ ಹಾಗೂ ವಿಶ್ವಾಸಗಳನ್ನು ಕಳೆದುಕೊಂಡಿದ್ದ ವಿರೂಪಾಕ್ಷನನ್ನು ಕೊನೆಗೆ ಬೇಸತ್ತ ಆತನ ಮಗನೇ ಕೊಂದನು. ಇದರಿಂದ ಗೊಂದಲ ಉಂಟಾಗಿ, ಈ ಅವಕಾಶವನ್ನು ಪಡೆದ ನರಸಿಂಹನು ರಾಜಧಾನಿಗೆ ತನ್ನ ಸೈನ್ಯದೊಂದಿಗೆ ನಡೆದು, ಅಧಿಕಾರವನ್ನು ವಹಿಸಿಕೊಂಡನು.ಈ ರೀತಿಯಲ್ಲಿ, ಕ್ರಿ.ಶ.೧೪೮೫ರಲ್ಲಿ ಸಂಗಮ ರಾಜವಂಶದ ಆಳ್ವಿಕೆಯು ಕೊನೆಗೊಂಡಿತು.

## ಸಾಳ್ವ ರಾಜವಂಶ

ಅಷ್ಟಾಗಿ ಸದ್ದುಗದ್ದಲವಿಲ್ಲದೆ, ಸಾಳ್ವ ರಾಜವಂಶವು ಪ್ರಾರಂಭವಾಯಿತು.ಮೂಲಭೂತವಾಗಿ, ಅದರ ದೊರೆಯಾದ ನರಸಿಂಹನು, ಕ್ರಿ.ಶ.೧೪೫೭ರಲ್ಲಿ ಮಲ್ಲಿಕಾರ್ಜುನನ ಅಧೀನದಲ್ಲಿ, ಚಂದ್ರಗಿರಿ ಬಳಿಯ ತಿರುಪತಿಯ ಸುತ್ತಲಿನ ಪ್ರದೇಶವನ್ನು ಆಳುತ್ತಿದ್ದ ಮಹಾಮಂಡಲೇಶ್ವರನಾಗಿದ್ದನು.ಆತನು ಅತ್ಯಂತ ನಿಷ್ಠಾವಂತ ಹಾಗೂ ನಂಬಿಕಸ್ಥನಾಗಿದ್ದನು.ಆದರೆ ಏನೂ ಮಾಡದೆ, ತನ್ನ ಸ್ವಾಮಿಯ ರಾಜ್ಯವು ಚೂರುಚೂರಾಗುತ್ತಿರುವುದನ್ನು ನಿಸ್ಸಹಾಯಕವಾಗಿ ಅವನಿಂದ ನೋಡಲಾಗಲಿಲ್ಲ.ದಕ್ಷಿಣ ಕಂಚಿ ದಂಡಯಾತ್ರೆಯಿಂದ ಗಜಪತಿಯ ಸೈನ್ಯದ ಹಿನ್ನಡೆಗೆ ಆತನೇ ಕಾರಣನಾಗಿದ್ದನು.ಕಪಿಲೇಂದ್ರನ ಮರಣದ ತಕ್ಷಣವೇ, ಆತನು ಉದಯಗಿರಿಯನ್ನು ಮರುಪಡೆದುಕೊಂಡು ನಂತರ ಮತ್ತಷ್ಟು ದಕ್ಷಿಣಕ್ಕೆ ಹೋಗಿ, ಮಧುರೈ ಪ್ರದೇಶದಲ್ಲಿದ್ದ ಸಮರಕೋಲಾಹಲ ಮುಖ್ಯಸ್ಥನ ದಂಗೆಯನ್ನು ಸದೆಬಡಿದು, ವಿಜಯನಗರದ ಅಧಿಪತ್ಯದ ಮರುಸ್ಥಾಪನೆ ಮಾಡಿದನು.ಬಹಮನಿಯರಿಂದ ಆಕ್ರಮಿತವಾಗಿದ್ದ ಆಂಧ್ರ ಪ್ರದೇಶದಲ್ಲಿ, ಮಚೂಲಿಪಟಂ ಹಾಗೂ ಕೊಂಡೈವೀಡುಗಳನ್ನು ಪಡೆದು, ಬಲಶಾಲಿಯಾದನು.ಇದು ದುರಾಕ್ರಮಣವಾದರೂ, ಆತನು ನಿಜವಾಗಿಯೂ ಸಂರಕ್ಷಕನಾಗಿದ್ದನು, ಏಕೆಂದರೆ ಅವನು ವಿಜಯನಗರವನ್ನು ಪುನರುಜ್ಜೀವನಗೊಳಿಸಿ, ರಾಜ್ಯದ ಉಳಿವಿನ ವಿಸ್ತರಣೆಯನ್ನು ಮಾಡಿದನು.ಅರಸನಾಗಿ, ಕ್ರಿ.ಶ.೧೪೮೫–೯೧ರಿಂದ, ಆತನು ಆರು ವರ್ಷಗಳ ಕಾಲ ಅಧಿಕಾರದಲ್ಲಿ ಇದ್ದನು. ಈ ಸಮಯದಲ್ಲಿ, ಆಂತರಿಕ ಶಾಂತಿಯನ್ನು ಮರುಸ್ಥಾಪಿಸಿ, ಶತ್ರುಗಳನ್ನು ತಲೆ ಎತ್ತದಂತೆ ಮಾಡಿ, ಒಲ್ಲದ ಸಾಮಂತರನ್ನು ನಿಯಂತ್ರಣಕ್ಕೆ ತರಬೇಕಾಯಿತು. ಅವುಗಳಲ್ಲಿ ಪ್ರಮುಖರೆಂದರೆ, ಉಮ್ಮತ್ತೂರು, ಹಾಗೂ ಆಂಧ್ರದಲ್ಲಿದ್ದ ಸಂಬೆಟ್ಟದ ಮುಖ್ಯಸ್ಥರಾಗಿದ್ದರು. ಒರಿಸ್ಸಾದ ಪುರುಷೋತ್ತಮ ಗಜಪತಿಯು ಉದಯಗಿರಿಯ ವಿರುದ್ಧ ಸಾಗಿ ಅದನ್ನು ಆಕ್ರಮಿಸಿಕೊಂಡನು.ಗಜಪತಿಯು ನರಸಿಂಹನನ್ನು ಸೆರೆಹಿಡಿದು, ನಂತರ ಆತನನ್ನು ಬಿಡುಗಡೆ ಮಾಡಿದನೆಂದು ಹೇಳಲಾಗುತ್ತದೆ. ಇದು ಆತನಿಗೆ ತಡೆಯಲಾರದ ಪೆಟ್ಟಾಗಿ, ಅದರಿಂದ ಚೇತರಿಸಿಕೊಳ್ಳಲೇ ಇಲ್ಲ; ಕ್ರಿ.ಶ.೧೪೯೧ರಲ್ಲಿ ಆತನು ಕೊನೆಯುಸಿರೆಳೆದನು.

ಆತನ ಇಬ್ಬರು ಗಂಡುಮಕ್ಕಳೂ ಬಹಳ ಕಿರಿಯವರಾಗಿದ್ದರಿಂದ, ನಿಷ್ಠಾವಂತ ದಳಪತಿಯಾದ ನರಸನಾಯಕನನ್ನು ರಾಜಪ್ರತಿನಿಧಿಯಾಗಿ ನೇಮಕ ಮಾಡಿದನು.ರಾಜನ ಮರಣದ ನಂತರ ನರಸಿಂಹನ ಹಿರಿಯ ಮಗನಾದ ತಿಮ್ಮನನ್ನು, ನರಸನಾಯಕನು ಸಿಂಹಾಸನದ ಮೇಲೆ ಕುಳ್ಳಿರಿಸಿದನು. ದುರಾದೃಷ್ಟವಶಾತ್, ರಾಜಕುಮಾರನನ್ನು ಅತ್ಯಂತ ಕುತಂತ್ರದಿಂದ ಹತ್ಯೆ ಮಾಡಿ ಎರಡನೆಯ ಮಗನಾದ ಇಮ್ಮಡಿ ನರಸಿಂಹನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಲಾಯಿತು.ಯುವರಾಜನು ನರಸನಾಯಕನ ಮಾತುಗಳನ್ನು ಕೇಳಲಿಲ್ಲ, ಹಾಗೂ ಅವರ ನಡುವಣ ಸಂಬಂಧಗಳು ಬಿಗಿಯಾಗಿ, ಪೆನುಕೊಂಡದ ಕೋಟೆಯಲ್ಲಿ ಅವನನ್ನು ಅಕ್ಷರಶಃ ಸೆರೆಯಲ್ಲಿ ಇಡಲಾಯಿತು.ಅಷ್ಟರ ವೇಳೆಗೆ, ಬಹಮನಿ ರಾಜ್ಯವು ಬಹುತೇಕ ಛಿದ್ರವಾಗಿ, ಬೀದರ್‌ನ ಬಾರಿದ್ ಶಾಹಿ ಹಾಗೂ ಬಿಜಾಪುರದ ಆದಿಲ್ ಶಾಹಿಗಳು ಹೆಚ್ಚು ಬಲಿಷ್ಠರಾಗುತ್ತಿದ್ದರು.ನರಸನಾಯಕನು ಇದರ ಪ್ರಯೋಜನವನ್ನು ಪಡೆದು, ಮುದ್ಗಲ್ ಹಾಗೂ ರಾಯಚೂರುಗಳನ್ನು ಆಕ್ರಮಿಸಿಕೊಂಡನು.

ಒರಿಸ್ಸಾದಲ್ಲಿ, ಪುರುಷೋತ್ತಮನು ಕಾಲವಾಗಿ, ಆತನ ಉತ್ತರಾಧಿಕಾರಿಯಾದ ಪ್ರತಾಪರುದ್ರನು ದಕ್ಷಿಣದತ್ತ ಕ್ರಮಿಸಿ, ವಿಜಯನಗರದ ಮೇಲೆ ಆಕ್ರಮಣ ಮಾಡಿದನು.ಆದರೆ ನರಸನಾಯಕನು ಆತನನ್ನು ಹಿಮ್ಮೆಟ್ಟಿಸಿದನು.ಈ ರೀತಿ ಸಾಮ್ರಾಜ್ಯದ ಪೂರ್ವ ಗಡಿಗಳನ್ನು ಮರುಸ್ಥಾಪಿಸಿ, ಹೊಸ ಚೈತನ್ಯ ಹಾಗೂ ಹುರುಪನ್ನು ಮುಖಂಡರಲ್ಲಿ ತುಂಬಿ, ವಿಜಯನಗರದ ಸ್ಥಾನಮಾನ ಹಾಗೂ ವರ್ಚಸ್ಸನ್ನು ಏರಿಸಿದನು.


ಕ್ರಿ.ಶ.೧೫೦೩ರಲ್ಲಿ ನರಸನಾಯಕನು ಮಡಿದು ಆತನ ಮಗನಾದ ವೀರನರಸಿಂಹನು, ಯುವರಾಜನಾದನು.ಇಮ್ಮಡಿ ನರಸಿಂಹನನ್ನು ಬಂಧನದಲ್ಲೇ ಇರಿಸಿದ್ದನು.ಎರಡು ವರ್ಷಗಳ ನಂತರ, ನರಸಿಂಹನು ಕುತಂತ್ರದ ಮೂಲಕ ಸಿಲುಕಿ ಕೊಲೆಗಡುಕನ ಖಡ್ಗಕ್ಕೆ ಬಲಿಯಾಗುವುದರೊಂದಿಗೆ ಸಾಳ್ವ ರಾಜವಂಶವು ಕೊನೆಗೊಂಡಿತು.

## ತುಳುವ ರಾಜವಂಶ

ನರಸನಾಯಕನು, ವಿಜಯನಗರವನ್ನು ಆಳಿದ ಮೂರನೆಯ ರಾಜವಂಶವಾದ ತುಳುವರಿಗೆ ಸೇರಿದವನಾಗಿದ್ದನು. ಈ ಅರಸರು, ತಾವು ಯಾದವ ವಂಶಜರೆಂದು ಹೇಳಿಕೊಂಡರು.ಕುಟುಂಬದ ಪ್ರಾರಂಭಿಕ ಸದಸ್ಯರ ಪೈಕಿ, ನರಸ ನಾಯಕನ ತಂದೆಯಾದ ಈಶ್ವರನಾಯಕನು ಒಬ್ಬನಾಗಿದ್ದನು. ಕ್ರಿ.ಶ.೧೫೦೫ರವರೆಗೆ ವೀರ ನರಸಿಂಹನು ಎರಡು ವರ್ಷಗಳ ಕಾಲ ರಾಜಪ್ರತಿನಿಧಿ ಕಾರ್ಯವನ್ನು ವಹಿಸಿಕೊಂಡಿದ್ದು ಕಾರ್ಯತಃ ಅರಸನಾದನು. ನರಸನ ಮರಣದ ನಂತರ ಮತ್ತೊಮ್ಮೆ ರಾಯಚೂರು ಹಾಗೂ ಮುದ್ಗಲ್‌ಗಳ ಹಸ್ತಾಂತರವಾಗಿ ಬಿಜಾಪುರದ ಯೂಸುಫ್ ಆದಿಲ್ ಖಾನನಿಂದ ಅದನ್ನು ಕಸಿದುಕೊಳ್ಳಲಾಯಿತು. ಆತನು ಅನೇಕ ದಂಗೆಗಳನ್ನೆದುರಿಸಿದ್ದರೂ ಪೋರ್ಚುಗಲ್ ದೇಶದೊಡನೆ ಸ್ನೇಹಪರ ಸಂಬಂಧಗಳನ್ನು ಬೆಳೆಸಿ ಅವರಿಂದ ಉತ್ತಮ ತಳಿಯ ಕುದುರೆಗಳನ್ನು ಖರೀದಿಸಿತು. ಅಶ್ವದಳದ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡನು. ಕೆಲವು ಪ್ರದೇಶಗಳಲ್ಲಿ ಮದುವೆಯ ಮೇಲಿನ ತೆರಿಗೆಯನ್ನು ರದ್ದುಗೊಳಿಸಿ ತನ್ನ ಪ್ರಜೆಗಳ ಕೃತಜ್ಞತೆಯನ್ನು ಪಡೆದುಕೊಂಡನು.ಕ್ರಿ.ಶ.೧೫೦೫–೦೯ರವರೆಗೂ ಆತನು ಐದು ವರ್ಷಗಳ ಕಾಲ ಆಳಿದನು.

ಕೃಷ್ಣದೇವರಾಯನನ್ನು ಭಾರತದ ಅತ್ಯಂತ ಮಹಾನ್ ಅರಸರ ಪೈಕಿ ಒಬ್ಬನೆಂದು ಪರಿಗಣಿಸಲಾಗುತ್ತದೆ; ಅದು ಕೇವಲ ಆತನ ಸೇನಾ ಕೌಶಲ್ಯ ಹಾಗೂ ದಿಗ್ವಿಜಯಗಳಿಗೆ ಮಾತ್ರವಲ್ಲದೆ, ಆತನ ಸದ್ಗುಣಗಳಿಗಾಗಿಯೂ ಪರಿಗಣಿಸಲಾಗುತ್ತದೆ.ವೀರನರಸಿಂಹನ ಮಲತಾಯಿಯಾದ ನಾಗಲಾದೇವಿಯ ಮಗನಾಗಿದ್ದ ಇವನು, ಮಂತ್ರಿ ತಿಮ್ಮರಸನ ನೆರವಿನೊಂದಿಗೆ, ಸಿಂಹಾಸನವನ್ನು ಪಡೆದುಕೊಂಡನೆಂದು ಹೇಳಲಾಗುತ್ತದೆ. ಶ್ರೀ ಕೃಷ್ಣ ಜನ್ಮಾಷ್ಟಮಿಯ ಶುಭದಿನ (೮–೮–೧೫೦೯) ದಂದು ಜನ್ಮದಿನದಂದು ನೂತನ ಅರಸನು ತನ್ನ ಪಟ್ಟಾಭಿಷೇಕಾಚರಣೆಯನ್ನು ಮಾಡಿಕೊಂಡನು. ಸಿಂಹಾಸನಾಧೀಶನಾದ ತಕ್ಷಣ, ಪ್ರಜೆಗಳ ಮನಸ್ಸಿನಲ್ಲಿ ಶಾಂತಿ ಹಾಗೂ ಸುವ್ಯವಸ್ಥೆಯ ಭಾವವನ್ನು ತುಂಬಲು, ಹಲವಾರು ಕ್ರಮಗಳನ್ನು ಕೈಗೊಂಡನು.

ಆತನು ಸಿಂಹಾಸನವನ್ನು ಏರುವ ಎರಡು ದಶಕಗಳಿಗೆ ಮುನ್ನ, ರಾಜ್ಯದಲ್ಲಿ ಆಂತರಿಕ ಕಲಹ ಹಾಗೂ ಅಪ್ರಚೋದಿತ ಬಾಹ್ಯ ಆಕ್ರಮಣಗಳು ನಡೆದು ಅಧಿಕವಾದ ಕರಗಳಿಂದ ಜನರು ಆರ್ಥಿಕವಾಗಿ ಕಂಗಾಲಾಗಿದ್ದರು. ತನ್ನ ರಾಜ್ಯದೆಲ್ಲೆಡೆ ವಿವಾಹ ಕರವನ್ನು ರದ್ದುಗೊಳಿಸುವುದು ರಾಜನ ಪ್ರಪ್ರಥಮ ಕ್ರಮಗಳಲ್ಲಿ ಒಂದಾಗಿತ್ತು. ಹೆಚ್ಚಿನ ಭೂಮಿ ಉಳುಮೆಯಡಿಯಲ್ಲಿ ಬರುವಂತೆ ಮಾಡಲು ಹಲವಾರು ಕ್ರಮಗಳನ್ನು ಕೈಗೊಂಡು, ರಾಜ್ಯದ ಸಂಪನ್ಮೂಲಗಳನ್ನು ವೃದ್ಧಿಪಡಿಸಿದನು. ಪ್ರಾಂತೀಯ ರಾಜ್ಯಪಾಲರು ಹಾಗೂ ಸಾಮಂತರು ನಿರ್ದಿಷ್ಟ ಸಂಖ್ಯೆಯ ಸೈನಿಕರನ್ನು ಒದಗಿಸಬೇಕಾಗಿದ್ದು,



ಅದನ್ನು ಮಾಡದಿದ್ದಲ್ಲಿ ಹೆಚ್ಚಿನ ದಂಡವನ್ನು ವಿಧಿಸುವಂತಹ ಕ್ರಮಗಳನ್ನು ಕೈಗೊಳ್ಳುವ ಮೂಲಕ, ಪ್ರಾಂತಗಳ ಆಡಳಿತದ ಪುನರ್‌ವ್ಯವಸ್ಥೆಯನ್ನು ಮಾಡಿದನು.ಈ ರೀತಿಯ ಕ್ರಮಗಳು ಜನರಲ್ಲಿ ಆತ್ಮಸ್ಥೈರ್ಯವನ್ನು ತುಂಬಿ, ಸಾಮ್ರಾಜ್ಯದಲ್ಲಿ ಉಲ್ಲಾಸಮಯ ಚೈತನ್ಯ ತುಂಬಿತು. ಪೆನುಗೊಂಡೆಯನ್ನು ವಶಪಡಿಸಿಕೊಂಡಿದ ಪಾಳೇಗಾರನು, ವಿಜಯನಗರಕ್ಕೆ ನಿರಂತರ ಸಮಸ್ಯೆಯ ಮೂಲವಾಗಿದ್ದನು. ಕೃಷ್ಣದೇವರಾಯ ಅವನನ್ನು ಸೋಲಿಸಿ, ಶ್ರೀರಂಗಪಟ್ಟಣದವರೆಗೂ ಹಿಂಬಾಲಿಸಿದನು.ಈ ಪ್ರದೇಶ ಹಾಗೂ ಮತ್ತೊಂದು ಭದ್ರಕೋಟೆಯಾದ ಶಿವಸಮುದ್ರವನ್ನು ಸೆರೆಹಿಡಿದು, ನೆಲಸಮ ಮಾಡಲಾಯಿತು.ಉಮ್ಮತ್ತೂರಿನ ಸುತ್ತಲಿನ ಪ್ರದೇಶಗಳಿಗೆ, ಸಾಳ್ವ ಗೋವಿಂದರಾಜನನ್ನು (ತಿಮ್ಮರಸರ ಸಹೋದರ) ರಾಜ್ಯಪಾಲನನ್ನಾಗಿ ನೇಮಕ ಮಾಡಲಾಯಿತು.



ಶಾಸನಸ್ಥ ಕೃಷ್ಣದೇವರಾಯ

ತಮ್ಮ ಸ್ಥಾನವನ್ನು ನಿಧಾನವಾಗಿ ಹಾಗೂ ದೃಢವಾಗಿ ಬಲಪಡಿಸಿಕೊಳ್ಳುತ್ತಿದ್ದ ಬಾಹ್ಯ ಶಕ್ತಿಯೆಂದರೆ, ಪೋರ್ಚುಗೀಸರು. ಅರಬ್ಬರಂತೆ, ವ್ಯಾಪಾರಿಗಳಾಗಿ ಭಾರತಕ್ಕೆ ಬಂದ ಇವರು, ವಿಜಯನಗರದ ಅಶ್ವದಳಕ್ಕೆ ಅಗತ್ಯವಾದ ಕುದುರೆಗಳನ್ನು ಬಹುಸಂಖ್ಯೆಯಲ್ಲಿ ಸರಬರಾಜು ಮಾಡುತ್ತಿದ್ದರು. ಬಿಜಾಪುರದ ಸುಲ್ತಾನನು ಬಹಮನಿಯರಿಂದ ಬಳುವಳಿಯಾಗಿ ಪಡೆದಿದ್ದ ಗೋವಾವನ್ನು ಅವನಿಂದ ಕಸಿದುಕೊಳ್ಳಲು ಕ್ರಿ.ಶ.೧೫೧೦ರಲ್ಲಿ ಅವರಿಗೆ ಸಾಧ್ಯವಾಯಿತು. ಕೃಷ್ಣದೇವರಾಯನಿಗೂ ಗೋವಾದ ಮೇಲೆ ಕಣ್ಣಿತ್ತು, ಆದರೆ ವ್ಯಾಪಾರ ಸಂಬಂಧಗಳನ್ನು, ಅದರಲ್ಲೂ ಕುದುರೆಗಳ ಸರಬರಾಜಿನ ವಹಿವಾಟನ್ನು ಹೊಂದಿದ್ದ ಪೋರ್ಚುಗೀಸ್‌ರನ್ನು ಎದುರು ಹಾಕಿಕೊಳ್ಳಲು ಆತನು ಸಿದ್ಧನಿರಲಿಲ್ಲ. ಆ ವೇಳೆಗಾಗಲೇ ಬಹಮನಿ ರಾಜ್ಯವು ಕುಸಿಯುತ್ತಿದ್ದು ಕೇಂದ್ರ ಸರ್ಕಾರವು ಬಹುತೇಕ ಅಧಿಕಾರವನ್ನು ಕಳೆದುಕೊಂಡು ಬಲಿಷ್ಠ ತರಫ್‌ದಾರರು ಸ್ವಾಯತ್ತತೆಯ ಪೈಪೋಟಿಯಲ್ಲಿ ತೊಡಗಿದ್ದರು. ಅನಿವಾರ್ಯತೆಯನ್ನು ತಡೆಯುವ ಸಲುವಾಗಿ, ಬಹಮನಿ ಸುಲ್ತಾನನಾದ ಮುಮ್ಮಡಿ ಷಹಾಬುದ್ದೀನ್ ಮಹಮ್ಮದ್‌ನು ವಿಜಯನಗರದ ವಿರುದ್ಧ ಜಿಹಾದ್ ಅಥವಾ ಪವಿತ್ರ ಯುದ್ಧವನ್ನು ಘೋಷಿಸಿದನು, ಇದರಿಂದ ಉನ್ನತ ಪದವಿಯಲ್ಲಿ ಇರುವ ಕುಲೀನರನ್ನು ಒಂದೇ ಗುಂಪಿನಡಿಗೆ ಬರುವಂತೆ ಮಾಡಿದನು. ಈ ಯೋಜನೆಯ ಭಾಗವಾಗಿ, ಯೂಸುಫ್ ಆದಿಲ್‌ಖಾನನ ನೆರವಿನೊಂದಿಗೆ, ವಿಜಯನಗರದ ವಿರುದ್ಧ ಧಾಳಿ ನಡೆಸಿದನಾದರೂ ಸದೆಬಡಿಯಲು ಸಾಧ್ಯವಾಗದಷ್ಟು ಬಲಿಷ್ಠವಾಗಿದ್ದನು. ಬದಲಾಗಿ, ಮುಖಾಮುಖಿ ಕಾಳಗವೊಂದರಲ್ಲಿ ಸುಲ್ತಾನನು ಸೋತು, ಗಾಯಗೊಂಡನು.ನೂತನ ರಾಜನು ಕೋವಿಲಕುಂಡದವರೆಗೂ ಆತನನ್ನು ಹಿಂಬಾಲಿಸಿ, ಅಲ್ಲಿಯೂ ಮತ್ತೊಂದು ಕಾಳಗದಲ್ಲಿ ತೊಡಗಿದರು.ಕೃಷ್ಣದೇವರಾಯನು ಸಿಂಹಾಸನವನ್ನು ಏರಿದ ಒಂದು ವರ್ಷದ ಒಳಗೇ, ಅಂದರೆ ಕ್ರಿ.ಶ.೧೫೦೯ರಲ್ಲಿ ಈ ಘಟನೆಯು ನಡೆಯಿತು.

ಎರಡು ವರ್ಷಗಳ ನಂತರ, ತುಂಗಭದ್ರೆಯನ್ನು ದಾಟಲು ಕೃಷ್ಣದೇವರಾಯನನ್ನು ಪ್ರೇರೇಪಿಸ ಲಾಯಿತು.ಆದಿಲ್ ಶಾಹನು ಬಿಜಾಪುರವನ್ನು ಆಳುತ್ತಿದ್ದಾಗ ರಾಯಚೂರನ್ನು ಗೆದ್ದನು. ಕ್ರಿ.ಶ.೧೫೨೦ರಲ್ಲಿ, ರಾಯಚೂರು ದೋಆಬ್‌ನ ಪ್ರದೇಶವನ್ನು ಮರುಪಡೆಯಲು ಇಸ್ಮಾಯಿಲ್ ಪ್ರಯತ್ನಿಸಿದನು, ಆದರೆ ಕ್ರಿ.ಶ.೧೫೨೦ರ ಮೇ ತಿಂಗಳಲ್ಲಿ ನಡೆದ ಭೀಕರ ಕಾಳಗದಲ್ಲಿ ಇಸ್ಮಾಯಿಲ್‌ನು ಭಾರಿ ಸೋಲನ್ನನುಭವಿಸುವುದರೊಂದಿಗೆ ಅದು ಕೊನೆಗೊಂಡಿತು.ಈ ಕಾಳಗದಲ್ಲಿ, ಆದಿಲ್‌ಶಾಹಿ ಸೈನ್ಯವು ರಾಯಚೂರು ಕೋಟೆಯನ್ನು ಕಸಿದುಕೊಂಡಿತು, ಆದರೆ ಪೋರ್ಚುಗೀಸ್ ಬಂದೂಕು ಸಿಪಾಯಿಗಳ ಗುಂಪಿನ ನೆರವಿನೊಂದಿಗೆ ಮಾತ್ರವೇ ಕೃಷ್ಣದೇವರಾಯನು ಅದನ್ನು ಮತ್ತೆ ಸೆರೆಹಿಡಿಯಲು ಸಾಧ್ಯವಾಯಿತು.

ಇದಕ್ಕಿಂತ ಭಯಾನಕವೆಂದರೆ, ಪ್ರತಾಪರುದ್ರ ಗಜಪತಿಯು ತಳೆದ ಧೋರಣೆಯು ಬೆದರಿಕೆಯದಾಗಿತ್ತು ಆತನೊಂದಿಗೆ ರಾಯನು ಸೆಣೆಸಾಡಿದ ಏಳು ವರ್ಷದ ಯುದ್ಧವೆಂದು ಬಣ್ಣಿಸಲಾಗುವ ಕಾಳಗದಲ್ಲಿ ತೊಡಗಿದ್ದನು. ಸ್ವತಃ ರಾಜನೇ ಬರೆದ 'ಅಮುಕ್ತಮಾಲ್ಯದ'ದಲ್ಲಿ ಈ ಕಾಳಗದ ಐದು ನಿರ್ದಿಷ್ಟ ಹಂತಗಳನ್ನು ಕುರಿತಾಗಿ ಮಾತನಾಡಿದ್ದಾನೆ: ಉದಯಗಿರಿಯ ಸ್ವಾಧೀನ, ಕೊಂಡವೀಡಿನ ಪತನ, ಕೊಂಡಪಳ್ಳಿಯ ಶರಣಾಗತಿ, ಸಿಂಹಾದ್ರಿಪೋತ್ನೂರಿನಲ್ಲಿ ವಿಜಯಸ್ಥಂಭದ ಸ್ಥಾಪನೆ ಹಾಗೂ ಕೊನೆಯದಾಗಿ, ಗಜಪತಿಯ ರಾಜಧಾನಿಯಾದ ಕಟಕದ (ಕಟ್ಟಕ್) ಮೇಲಿನ ಧಾಳಿ. ೧೮ ತಿಂಗಳ ಮುತ್ತಿಗೆಯ ನಂತರ, ಕ್ರಿ.ಶ.೧೫೧೫ರ ಜೂನ್ ತಿಂಗಳಲ್ಲಿ ಉದಯಗಿರಿ ಕೋಟೆಯ ಪತನವಾಯಿತು. ನಂತರ, ಅಡ್ಡಂಕಿ, ವಿನುಕೊಂಡ, ಬೆಲ್ಲಮ್‌ಕೊಂಡ ಹಾಗೂ ನಾಗಾರ್ಜುನಕೊಂಡಗಳಂತಹ ಸಣ್ಣ ಕೋಟೆಗಳನ್ನು ಪಡೆದುಕೊಂಡ ನಂತರ, ಒಂದೇ ಧಾಳಿಯಲ್ಲಿ ಕೊಂಡವೀಡನ್ನು ಸೆರೆಹಿಡಿಯಲಾಯಿತು.ಈ ಬಾರಿ, ಗಜಪತಿಯ ರಾಜಕುಮಾರ ಹಾಗೂ ಇತರ ಸೇನಾ ನಾಯಕರೂ ಸೇರಿದಂತೆ, ಇಬ್ಬರು ಮುಸಲ್ಮಾನ ದಂಡನಾಯಕರನ್ನು ಕ್ರಿ.ಶ.೧೫೧೫ರ ಜೂನ್ ತಿಂಗಳಲ್ಲಿ ಸೆರೆಹಿಡಿಯಲಾಯಿತು. ಅದರ ನಂತರ, ಕ್ರಿ.ಶ.೧೫೧೬ ಹಾಗೂ ೧೫೧೭ರ ನಡುವೆ, ಕೊಂಡಪಲ್ಲಿ ಹಾಗೂ ಇತರ ಸಣ್ಣ ಕೋಟೆಗಳಾದ ಅನಂತಗಿರಿ, ಉದ್ರಕೊಂಡ, ಉರ್ಲಗೊಂಡ, ನಲಗೊಂಡ, ಖಂಭಮ್ಮೆಟ್ಟು, ಮುಂತಾದವುಗಳೊಂದಿಗೆ ವಿಜಯವಾಡವೂ ಬಿದ್ದಿತು. ತೆಲಂಗಾಣ ಹಾಗೂ ಕರಾವಳಿ ಪ್ರದೇಶಗಳ ವಿಜಯದ್ವಾರಗಳು ತೆರೆಯಲ್ಪಟ್ಟವು. ಗಜಪತಿಯ ಸಾಮಂತನಾದ ಸೀತಾಪತಿಯು (ಉರುಫ್ ಶಿತಾಬ್ ಖಾನ್) ವಿರೋಧವನ್ನು ಪ್ರದರ್ಶಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ರಾಜಮಂಡ್ರಿಯು ಸುಲಭವಾಗಿ ವಶವಾಯಿತು. ಅಲ್ಲಿಂದ, ಸಿಂಹಾಚಲವು



**ರಾಣಿಯರೊಂದಿಗೆ ಕೃಷ್ಣದೇವರಾಯ**

ದೂರವೇನಿರಲಿಲ್ಲ. ಪೊತ್ನೂರಿನಲ್ಲಿ, ಆತನು ವಿಜಯ ಸ್ತಂಭವನ್ನು ಪ್ರತಿಷ್ಠಾಪಿಸಿದನು. ಆತನ ಸೈನ್ಯವು ಕಟಕ್‌ನತ್ತ ನುಗ್ಗಿ, ಅದನ್ನು ಸುತ್ತುವರೆಯಿತು. ಕೊನೆಯದಾಗಿ, ಪ್ರತಾಪರುದ್ರನು ಪರಿಸ್ಥಿತಿಯನ್ನು ಅಂಗೀಕರಿಸಿ, ರಾಜನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟನು; ಇದಕ್ಕೆ ಬದಲಾಗಿ ರಾಜನು ಕೃಷ್ಣೆಯ ಉತ್ತರದ ಪ್ರದೇಶವನ್ನು ಧಾರಾಳ ಮನಸ್ಸಿನಿಂದ ಹಿಂತಿರುಗಿಸಿದನು.

ಮೂರನೆಯ ಬಾರಿಗೆ, ಅಂದರೆ ಕ್ರಿ.ಶ. ೧೫೨೨ರಲ್ಲಿ, ಕೃಷ್ಣದೇವರಾಯ ಹಾಗೂ ಆದಿಲ್ ಶಾಹಿಯ ನಡುವೆ ಕಾಳಗ ನಡೆಯಿತು. ತನ್ನಿಂದ ಕಸಿದುಕೊಂಡ ಪ್ರದೇಶಗಳೆಲ್ಲವನ್ನೂ ಹಿಂತಿರುಗಿ ಸಬೇಕೆಂದು ಕೋರುತ್ತ, ಆದಿಲ್ ಶಾಹಿಯು ವಿಜಯನಗರಕ್ಕೆ ತನ್ನ ರಾಯಭಾರಿಯನ್ನು ಕಳುಹಿಸಿದನು. ಇಸ್ಮಾಯಿಲ್‌ನು ರಾಜನ ಪಾದಸ್ಪರ್ಶ ಮಾಡಿ ಗೌರವವನ್ನು ಸಲ್ಲಿಸಿದ್ದೇ ಆದಲ್ಲಿ, ಅವನ ನಿಬಂಧನೆಗಳಿಗೆ ಒಪ್ಪುವಂತೆ ಕೃಷ್ಣದೇವರಾಯನು ತಿಳಿಸಿದನು. ಅವರು ಮುದ್ಗಲ್‌ನಲ್ಲಿ ಸಂಧಿಸುವ ಏರ್ಪಾಡಾಗಿತ್ತು, ಆದರೆ, ಅಲ್ಲಿಗೆ ಇಸ್ಮಾಯಿಲ್ ಬರಲೇ ಇಲ್ಲ, ಈ ಕಾರಣದಿಂದ ಕೃಷ್ಣದೇವರಾಯನು ಇಸ್ಮಾಯಿಲ್‌ನ ವಿರುದ್ಧ ಸೈನ್ಯವನ್ನು ತೆಗೆದುಕೊಂಡು ಹೋದನು. ಒಂದೆರಡು ಮುಖಾಮುಖಿಗಳಲ್ಲಿ ಇಸ್ಮಾಯಿಲ್‌ನನ್ನು ಸೋಲಿಸಿ, ಪಲಾಯನಗೈಯುವಂತೆ ಮಾಡಿದನು. ವಿಜಯಶಾಲಿಯಾಗಿ ಬಿಜಾಪುರವನ್ನು ಪ್ರವೇಶಿಸಿದ ರಾಯನು (ಕ್ರಿ.ಶ.೧೫೨೨ರ ಮಾರ್ಚ್ ತಿಂಗಳಲ್ಲಿ) ನಾಲ್ಕು ದಿನಗಳವರೆಗೂ ಅಲ್ಲೇ ಬಿಡಾರ ಹೂಡಿದನು.ನಂತರ ಗುಲ್ಬರ್ಗಾಕ್ಕೆ ತೆರಳಿದ ಕೃಷ್ಣದೇವರಾಯನು, ಕುಲೀನರಿಂದ ಸೆರೆಯಲ್ಲಿದ್ದ ಮೂರನೆಯ ಮಹಮ್ಮದ್‌ನ ಮಕ್ಕಳಾದ ಮೂವರು ಬಹಮನಿ ರಾಜಕುಮಾರರನ್ನು ಮುಕ್ತಗೊಳಿಸಿದನು.ಅವರಲ್ಲಿ ಹಿರಿಯವನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ, ಚಿಕ್ಕವರನ್ನು ವಿಜಯನಗರಕ್ಕೆ ಕರೆದೊಯ್ದು, ಅಲ್ಲಿ ಅವರನ್ನು ಚೆನ್ನಾಗಿ ನೋಡಿಕೊಳ್ಳಲಾಯಿತು. ಈ ಕಾರ್ಯದಿಂದಾಗಿ ಅಲ್ಪಾವಧಿಗಾದರೂ, ಕೃಷ್ಣದೇವರಾಯನು ಬಹಮನಿ ಸಾಮ್ರಾಜ್ಯದ ಪುನರುಜ್ಜೀವನವನ್ನು ಮಾಡಿ, ಅದರ ಗುರುತಾಗಿ, ಯವನರಾಜ್ಯ-ಪ್ರತಿಷ್ಠಾಪನಾಚಾರ್ಯನೆಂಬ ಬಿರುದನ್ನೂ ಪಡೆದುಕೊಂಡನು.

ಕೃಷ್ಣದೇವರಾಯನು ಕೊನೆಯ ವರ್ಷಗಳನ್ನು ತನ್ನ ರಾಜಧಾನಿಯಲ್ಲಿ ಶಾಂತಿಯುತವಾಗಿ ಕಳೆದನು. ಏತನ್ಮಧ್ಯೆ, ಆರು ವರ್ಷದ ಮಗನಾದ ತಿರುಮಲನ ಪಟ್ಟಾಭಿಷೇಕವನ್ನು ನೆರವೇರಿಸಿದನಾದರೂ ಮರು ವರ್ಷವೆ, ಯುವರಾಜನು ಕುತಂತ್ರಗಳಿಗೆ ಸಿಲುಕಿ ಮಡಿದನೆಂದು ಶಂಕಿಸಲಾಗಿದೆ. ಮಂತ್ರಿಯಾದ ಸಾಳ್ವ ತಿಮ್ಮರಸನ ಮಗನಾದ ತಿಮ್ಮದಂಡನಾಯಕನು ಹೀಗೆ ಮಾಡಿದನೆಂದು ಶಂಕಿಸಲಾಯಿತು.ತಂದೆ-ಮಕ್ಕಳಿಬ್ಬರನ್ನೂ ಸೆರೆಮನೆಗೆ ಹಾಕಿದನು, ಆದರೆ ತಿಮ್ಮನು ಗುತ್ತಿಗೆ ತಪ್ಪಿಸಿಕೊಂಡು ಹೋದನು. ಕೃಷ್ಣದೇವರಾಯನು ಆವರಿಬ್ಬರನ್ನೂ ಸೆರೆಹಿಡಿದು, ಅವರನ್ನು ಈ ಬಾರಿ ಕುರುಡು ಮಾಡಿದನು. ನೂನಿಝ್‌ನ ವೃತ್ತಾಂತದಲ್ಲಿ ಈ ಘಟನೆ ಕುರಿತಾಗಿ ಹೇಳಲಾಗಿದೆ, ಆದರೆ ತಿರುಪತಿಯಲ್ಲಿ ದೊರೆತ ಶಾಸನಗಳಲ್ಲಿ ಈ ಅವಧಿಯ ನಂತರವೂ ಸಾಳ್ವ ತಿಮ್ಮನನ್ನು ಹೆಸರಿಸಲಾಗಿದೆ. ಕ್ರಿ.ಶ.೧೫೨೯ರಲ್ಲಿ, ಕೇವಲ ೪೨ ವರ್ಷ ವಯಸ್ಸಿಗೇ ಕೃಷ್ಣದೇವರಾಯನು ಅಸ್ವಸ್ಥನಾಗಿ, ತನ್ನ ಕೊನೆಯುಸಿರೆಳೆದನು.

ಕೃಷ್ಣದೇವರಾಯನು ಅಚ್ಚಳಿಯದ ಪ್ರಭಾವವನ್ನು ಬೀರಿದ ಭಾರತದ ಅತ್ಯಂತ ಗೌರವಾನ್ವಿತ ಅರಸರಲ್ಲಿ ಒಬ್ಬನೆಂದು ಪರಿಗಣಿಸಲ್ಪಡುತ್ತಾನೆ. ಸೈನಿಕ, ವಿದ್ವಾಂಸ ಹಾಗೂ ರಾಜನೀತಿಜ್ಞನಾದ ಆತನ ವ್ಯಕ್ತಿತ್ವವು ಪ್ರಭಾವಶಾಲಿಯಾದುದು. ಆತನ ಆಳ್ವಿಕೆಯ ಸಮಯದಲ್ಲಿ ರಾಜ್ಯದಲ್ಲಿದ್ದ ೧೬ನೆಯ ಶತಮಾನದ ಪೋರ್ಚುಗಲ್‌ನ ಯಾತ್ರಿಕನೂ, ರಾಜನನ್ನು ನಿಕಟವಾಗಿ ಕಂಡಿದ್ದ ಡೊಮಿನಿಗೋ ಪೇಝ್‌ನು, ರಾಜನ ವ್ಯಕ್ತಿತ್ವದ ಸ್ವಾರಸ್ಯಕರ ವೃತ್ತಾಂತವನ್ನು ಬರೆದಿದ್ದಾನೆ. ಆತನ ಪ್ರಕಾರ, ರಾಜನು "ಮಹಾನ್ ಅರಸನೂ, ನ್ಯಾಯವಾದಿಯೂ ಆಗಿದ್ದನು, ಆದರೆ ಥಟ್ಟನೆ ಕೋಪಾವೇಶಗಳಿಗೆ ಒಳಗಾಗುತ್ತಿದ್ದನು. ಮಧ್ಯಮ ಮೈಕಟ್ಟನ್ನು ಹೊಂದಿದ್ದು, ಗೌರವವರ್ಣದವನೂ, ಒಳ್ಳೆಯ ದೇಹದಾರ್ಢ್ಯದವನಾಗಿ, ತೆಳ್ಳ ದೇಹಕ್ಕಿಂತ ಸ್ಥೂಲ ದೇಹಿಯೇ ಆಗಿದ್ದನು. ಮೈ ಮೇಲೆ ಸಿಡುಬಿನ ಕಲೆಗಳಿದ್ದವು. ಅತ್ಯಂತ ಭಯಭೀತಿಗಳನ್ನು ಹುಟ್ಟಿಸುವ ಹಾಗೂ ಅತ್ಯಂತ ಲವಲವಿಕೆಯಿಂದ ಗೆಲುವಾಗಿ ಇದ್ದು, ಎಲ್ಲ ರೀತಿಯಲ್ಲೂ ಆದರ್ಶ ರಾಜನಾಗಿದ್ದನು; ವಿದೇಶೀಯರನ್ನು ಗೌರವಿಸಲು ಸನ್ನದ್ಧನಾದವನು, ಅವರನ್ನು ಆದರದಿಂದ ಬರಮಾಡಿಕೊಳ್ಳುವವನಾಗಿದ್ದನು. ಯುದ್ಧದಲ್ಲಿ, ತಾನೇ ಸ್ವತಃ ಸೈನ್ಯದ ಮುಂದಾಳತ್ವವನ್ನು ವಹಿಸಿ, ಅತ್ಯಂತ ಅಪಾಯಕಾರಿ ಸನ್ನಿವೇಶಗಳಲ್ಲಿ, ಅಪರಿಮಿತ ಧೈರ್ಯವನ್ನು ಪ್ರದರ್ಶಿಸುತ್ತಿದ್ದನು. ಆಡಳಿತದ ವಿಷಯದಲ್ಲಿ, ನಿಯಮಬದ್ಧನೂ, ವ್ಯವಸ್ಥಿತನೂ ಆಗಿದ್ದು, ತನ್ನ ಜನರ ಹಾಗೂ ರಾಜ್ಯದ ಒಳಿತು ಹಾಗೂ ಸಮೃದ್ಧಿಯನ್ನೇ ಸದಾಕಾಲ ಚಿಂತಿಸುತ್ತಿದ್ದನು. ಕೃಷ್ಣದೇವರಾಯನು ಮಹಾನ್ ವಿದ್ವಾಂಸನಾಗಿದ್ದು, ಆತನ ತೆಲುಗು ಕೃತಿಯಾದ ಅಮುಕ್ತಮಾಲ್ಯದವು ಆತನ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ಸಂಸ್ಕೃತ ನಾಟಕವಾದ ಜಾಂಬವತಿ ಕಲ್ಯಾಣಂ ಎಂಬುದನ್ನೂ ಆತನೇ ಬರೆದನೆಂದು ಹೇಳಲಾಗುತ್ತದೆ. ಅಷ್ಟದಿಗ್ಗಜರು ಎಂದು ಕರೆಯಲ್ಪಡುತ್ತಿದ್ದ ಎಂಟು ಪ್ರಸಿದ್ಧ ಕವಿಗಳ ಸಾಹಿತ್ಯಕ ಕೂಟವು ಅವನ ಭುವನವಿಜಯದಲ್ಲಿ ಇತ್ತು. ಕವಿಗಳ ಪೈಕಿ, ಅಲ್ಲಾಸಾನಿ ಪೆದ್ದಣ,



ವಿರೂಪಾಕ್ಷ ದೇವಾಲಯದ ದ್ವಾರಗೋಪುರ, ಹಂಪೆ

ಹಾಗೂ ನಂದಿ ತಿಮ್ಮಣ್ಣನ ಹೆಸರುಗಳನ್ನು ಇಲ್ಲಿ ವಿಶೇಷವಾಗಿ ಹೆಸರಿಸಬೇಕು. ಕುಮಾರವ್ಯಾಸನ ಅಪೂರ್ಣವಾದ ಭಾರತವನ್ನು ಕನ್ನಡದಲ್ಲಿ ತಿಮ್ಮಣ್ಣ ಕವಿಯು ಪೂರ್ಣಗೊಳಿಸಿ ಕರ್ನಾಟಕ ಕೃಷ್ಣರಾಯ–ಭಾರತ–ಕಥಾಮಂಜರಿ ಎಂಬ ಹೆಸರಿನಲ್ಲಿ, ಅದನ್ನು ರಾಜನಿಗೆ ಸಲ್ಲಿಸಿದನು. ಅವಿಸ್ಮರಣೀಯ ವ್ಯಕ್ತಿಗಳಾದ ಪುರಂದರದಾಸ, ಕನಕದಾಸ ಹಾಗೂ ವ್ಯಾಸತೀರ್ಥರು ಈ ಕಾಲಕ್ಕೆ ಸೇರಿದವರಾಗಿದ್ದಾರೆ.

ಆತನ ಆಳ್ವಿಕೆಯಲ್ಲಿ ರಚನಾತ್ಮಕ ಜಾತ್ಯಾತೀತ ಹಾಗೂ ಧಾರ್ಮಿಕ ಚಟುವಟಿಕೆಗಳಲ್ಲದೆ, ಪಟ್ಟಣ, ಅಣೆಕಟ್ಟು, ನಾಲೆ, ಕೆರೆ, ದೇವಾಲಯ ಹಾಗೂ ಸಾರ್ವಜನಿಕ ಉಪಯೋಗದ ಕಟ್ಟಡಗಳು ನಿರ್ಮಾಣದ ಉಚ್ಛ್ರಾಯ ಸ್ಥಿತಿಯನ್ನು ತಲುಪಿತು. ರಾಜಧಾನಿಗೆ ಉಪನಗರದ ಪ್ರದೇಶಗಳ ಸೇರ್ಪಡೆ ಮಾಡಲಾಯಿತು, ತಾಯಿ ನಾಗಲಾದೇವಿಯ ಸ್ಮರಣೆಯಲ್ಲಿ ನಾಗಲಾಪುರ ಹಾಗೂ ಎರಡನೆಯ ರಾಣಿ ತಿರುಮಲಾದೇವಿಯ ಹೆಸರಿನಲ್ಲಿ ತಿರುಮಲಾದೇವಿಯವರ ಪಟ್ಟಣ ಎಂಬ ಎರಡು ನಗರಗಳನ್ನು ನಿರ್ಮಾಣ ಮಾಡಿಸಿದನು. ಆತನ ರಾಜ್ಯಾಭಿಷೇಕದ ಸಂದರ್ಭದಲ್ಲಿ, ವಿರೂಪಾಕ್ಷ ದೇವಾಲಯದಲ್ಲಿ ಸಭಾಂಗಣ ಹಾಗೂ ಗೋಪುರಗಳನ್ನು ನಿರ್ಮಾಣ ಮಾಡಲಾಯಿತು. ಉದಯಗಿರಿಯನ್ನು ಪಡೆದ ಮೇಲೆ, ಕೃಷ್ಣಸ್ವಾಮಿಯ ದೇವಾಲಯದ ನಿರ್ಮಾಣ ಮಾಡಿ, ಉದಯಗಿರಿ ಕೋಟೆಯಿಂದ ವಿಜಯದ ದ್ಯೋತಕವಾಗಿ ತಂದ ಕೃಷ್ಣನ ವಿಗ್ರಹವನ್ನು ಇಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು. ಆತನ ಯಶಸ್ವೀ ಒರಿಸ್ಸಾ ದಂಡಯಾತ್ರೆಯ ಸ್ಮರಣಾರ್ಥವಾಗಿ ಭುವನವಿಜಯ ಎಂಬ ಅರಮನೆ ನಿರ್ಮಾಣ ಮಾಡಲಾಯಿತು. ಕೆಲವು ವಿದ್ವಾಂಸರು ವಿಠ್ಠಲ ದೇವಾಲಯವನ್ನು ಆತನೇ ನಿರ್ಮಾಣ ಮಾಡಿದನೆಂದು ಹೇಳುತ್ತಾರೆ. ಈ ಕಾಲದ ಎತ್ತರದ ಪ್ರವೇಶದ್ವಾರ ಗೋಪುರಗಳು ರಾಯ–ಗೋಪುರಗಳೆಂದೇ ಹೆಸರುವಾಸಿಯಾಗಿವೆ. ನೂರು ಹಾಗೂ ಸಾವಿರ ಕಂಭಗಳ ಮಂಟಪಗಳು ಈ ಅವಧಿಯಲ್ಲೇ ಅಸ್ತಿತ್ವಕ್ಕೆ ಬಂದವು. ಇವನ ಇಬ್ಬರು ಗಂಡು ಮಕ್ಕಳ ಪೈಕಿ, ತಿರುಮಲನಿಗೆ ವಿಷವಿಟ್ಟ ಕಾರಣದಿಂದ ಮರಣ ಹೊಂದಿದರೆ, ಚಿಕ್ಕವನು ಮರಣ ಹೊಂದಿದಾಗ ಕೇವಲ ೧೮ ತಿಂಗಳ ಎಳೆ ಹುಡುಗನಾಗಿದ್ದನು. ರಾಯನ ಇಬ್ಬರು ಹೆಣ್ಣುಮಕ್ಕಳಾದ ತಿರುಮಲಾಂಬ ಹಾಗೂ ವೆಂಗಲಾಂಬರು ಕ್ರಮವಾಗಿ ಅರವೀಡು ಕುಟುಂಬದ ರಾಮರಾಯ ಹಾಗೂ ತಿರುಮಲರಾಯ ಸಹೋದರರನ್ನು ವಿವಾಹವಾಗಿದ್ದರು.

ಕ್ರಿ.ಶ.೧೫೩೯–೪೨ಗಳ ನಡುವೆ, ಕೃಷ್ಣದೇವರಾಯನ ಮಲ–ಸಹೋದರನೂ ಹಾಗೂ ನರಸನಾಯಕನ ಮೂವರು ಪತ್ನಿಯರ ಪೈಕಿ ಕೊನೆಯವಳಾದ ಓಬಮ್ಮನ ಮಗನೂ ಆದ ಅಚ್ಯುತರಾಯನು ಉತ್ತರಾಧಿಕಾರಿಯಾದನು. ಮೊದಲನೆಯ ಪತ್ನಿಯಾದ ತಿಪ್ಪಾಜಿಯ ಮಗನು ವೀರನರಸಿಂಹ ಅಚ್ಯುತನಿಗೆ ರಂಗನೆಂಬ ತಮ್ಮನಿದ್ದು, ಅವನ ಮಗನ ಹೆಸರು ಸದಾಶಿವ. ಅರಮನೆಯ ಕುತಂತ್ರಗಳನ್ನು ತಪ್ಪಿಸುವ ಸಲುವಾಗಿ, ಕೃಷ್ಣದೇವರಾಯನು ತನ್ನ ಮಲ ತಮ್ಮನನ್ನು ಬಂಧನದಲ್ಲಿಟ್ಟನು, ತದನಂತರದ ಘಟನೆಗಳು ಅಚ್ಯುತನನ್ನೇ ಉತ್ತರಾಧಿಕಾರಿಯಾಗಿ ನೇಮಕ ಮಾಡುವಂತಾಯಿತು. ರಾಮರಾಯನು ಬದುಕುಳಿದಿರುವ ಎಳೆಯ ಮಗನ ಪರವಾಗಿ ಚಿಂತಿಸಿ, ಈ ನಿರ್ಣಯಕ್ಕೆ ತನ್ನ ಸಮ್ಮತಿಯನ್ನು ಸೂಚಿಸಲಿಲ್ಲ. ಹೊಡೆದಾಟಗಳು ಹಾಗೂ ಕುತಂತ್ರಗಳು ಮುಂದುವರಿದು, ತಮ್ಮ ಪೂರ್ವಿಕರು ಎದುರಿಸಿದ ಅವಮಾನಗಳಿಗೆ ಸೇಡನ್ನು ತೀರಿಸಿಕೊಳ್ಳಲು, ವಿಜಯನಗರದ ಮೇಲೆ ಧಾಳಿ ನಡೆಸಲು ಗಜಪತಿ ಪ್ರತಾಪರುದ್ರ ಹಾಗೂ ಬಿಜಾಪುರದ ಇಸ್ಮಾಯಿಲ್ ಆದಿಲ್ ಶಾಹರಿಗೆ ಅವಕಾಶ ನೀಡಿತು. ಗಜಪತಿಯನ್ನು ಹಿಮ್ಮೆಟ್ಟಿಸುವಲ್ಲಿ ಅಚ್ಯುತನು ಯಶಸ್ವಿಯಾದನು. ಕೃಷ್ಣದೇವರಾಯನ ಕೊನೆಯ ಕಾಲದಲ್ಲಿ, ಇಸ್ಮಾಯಿಲ್‌ನು ಅಮೂಲ್ಯವಾದ ಕೋಟೆಗಳಾದ ರಾಯಚೂರು ಹಾಗೂ ಮುದ್ಗಲ್‌ಗಳನ್ನು ಸೆರೆಹಿಡಿದನು. ಗೋಲ್ಕೊಂಡದ ಕುಲಿ–ಕುತುಬ್–ಉಲ್–ಮುಲ್ಕ್‌ನು ಕೊಂಡವೀಡನ್ನು ತೆಗೆದುಕೊಂಡನು, ಆದರೆ ಸೇನಾಧಿಪತಿಗಳು, ಮುಖಂಡರು ಹಾಗೂ ಸಂಬಂಧಿಕರು ತೋರಿದ ನಿಷ್ಠೆಯಿಂದ, ಅಚ್ಯುತನು ಶತ್ರುಗಳನ್ನು ಯಶಸ್ವಿಯಾಗಿ ಹೊಡೆದೋಡಿಸಿ, ಕೋಟೆಗಳನ್ನು ಮರಳಿ ಪಡೆದನು.ದಕ್ಷಿಣದಲ್ಲಿ, ಕಂಚಿ, ಕೇರಳ ಹಾಗೂ ಉಮ್ಮತ್ತೂರುಗಳಲ್ಲಿ ದಂಗೆಗಳೆದ್ದವು, ಆದರೆ, ಅಚ್ಯುತನ ಭಾವಮೈದುನನಾದ ಸಲಕರಾಜು ತಿರುಮಲನು, ಈ ದಂಗೆಗಳನ್ನು ಹತ್ತಿಕ್ಕಿದನು.ಪಾಂಡ್ಯರಾಜನ ಪ್ರದೇಶವನ್ನು ಅವನಿಂದ ಕಸಿದುಕೊಳ್ಳಲಾಯಿತು, ಆದರೆ ಅದನ್ನು ಅವನಿಗೆ ಮರಳಿ ನೀಡಿ, ಆತನ ಮಗಳಾದ ವರದಾಂಬಿಕೆಯನ್ನು ಅಚ್ಯುತನಿಗೆ ಮದುವೆ ಮಾಡಿಸಲಾಯಿತು.

ಆತನ ಆಳ್ವಿಕೆಯ ನಂತರದಲ್ಲಿ, ಅಚ್ಯುತನು ಐಶಾರಾಮಿ ಜೀವನವನ್ನು ನಡೆಸಲು ಪ್ರಾರಂಭಿಸಿದನು. ಕುಲೀನರಿಂದ ಬಲವಂತವಾಗಿ ಹಣ ಪಡೆದು, ಸಂಪತ್ತನ್ನು ಕೂಡಿಹಾಕಿದನು, ಹಾಗೂ ಬಲಿಗಳನ್ನು ಆಚರಿಸುವ ಹಾಗೂ ವೈಭವೋಪೇತವಾದ ಸಂಸ್ಥೆಗಳಾದ ಆನಂದನಿಧಿಯಂತಹ ಟ್ರಸ್ಟ್‌ಗಳನ್ನು ಈ ಉದ್ದೇಶಕ್ಕಾಗಿ ಪ್ರಾರಂಭಿಸಿದನು.ಆಡಳಿತವು ಅವನತಿ ಹೊಂದಿ, ಜನರ ಮೇಲೆ ಭಾರವಾದ ಕರವನ್ನು ವಿಧಿಸಲಾಯಿತು. ಕ್ರಿ.ಶ.೧೫೪೨ರಲ್ಲಿ ಆತನ ಮರಣದ ನಂತರ, ವರದಾಂಬೆಯ ಮಗನಾದ ವೆಂಕಟನಿಗೆ ಆತನ ಸೋದರಮಾವನು ಬೇಗಬೇಗನೆ ಪಟ್ಟಾಭಿಷೇಕವನ್ನು ಮಾಡಿದನು. ಸಲಾಕ ತಿರುಮಲನು ರಾಜಪ್ರತಿನಿಧಿಯಾದನು, ಆದರೆ, ರಾಜಮಾತೆಯು ಸ್ವತಃ ಈ ಹೆಜ್ಜೆಯ ಹಿಂದಿನ

ಉದ್ದೇಶವನ್ನು ಕುರಿತಾಗಿ ಸಂಶಯ ವ್ಯಕ್ತಪಡಿಸಿ, ಆದಿಲ್ ಶಾಹನ ಮಧ್ಯಸ್ಥಿಕೆ ಹಾಗೂ ನೆರವನ್ನು ಬಯಸಿದಳು. ಅಳಿಯ ರಾಮರಾಯನು (ಕೃಷ್ಣದೇವರಾಯನ ಅಳಿಯ) ಸದಾಶಿವನ ಪರವಾಗಿ ಕ್ರಮ ಕೈಗೊಂಡು, ಆತನನ್ನು ಗುತ್ತಿಯ ಸೆರೆಮನೆಯಿಂದ ಬಿಡಿಸಿ, ಆದಿಲ್ ಶಾಹಿಯ ನೆರವನ್ನು ಕೋರಿದನು.ಇದರ ಮಧ್ಯೆ, ತಿರುಮಲನು ರಾಜಕುಮಾರ ವೆಂಕಟನನ್ನು ಹಿಂದು-ಮುಂದು ಯೋಚಿಸದೆ ಕೊಂದನು. ಇದರ ನಂತರ, ಯುದ್ಧಗಳ ಸರಣಿಯೇ ನಡೆದು ತುಂಗಭದ್ರೆಯ ದಡದಲ್ಲಿ ನಡೆದ ಕೊನೆಯ ಯುದ್ಧದಲ್ಲಿ, ತಿರುಮಲನು ಮರಣ ಹೊಂದಿದನು.

ಕ್ರಿ.ಶ.೧೪೫೩–೭೨ರವರೆಗೂ ಆಳಿದ ಸದಾಶಿವನನ್ನು ವಿಜಯನಗರ ಸಿಂಹಾಸನದಲ್ಲಿ ಕುಳ್ಳಿರಿಸಲಾಯಿತು, ಆದರೆ ಅವನು ಇನ್ನೂ ಕಿರಿಯನೆಂದು, ರಾಮರಾಯನು ಎಲ್ಲ ಅಧಿಕಾರವನ್ನೂ ವಹಿಸಿಕೊಂಡನು. ಸದಾಶಿವನು ವಯಸ್ಸಿಗೆ ಬಂದಾಗ, ಅವನನ್ನು ಅಕ್ಷರಶಃ ಬಂಧನದಲ್ಲಿ ಇರಿಸಲಾಯಿತು. ಈ ನಂತರದ ಕಾಲಾವಧಿಯುದ್ದಕ್ಕೂ, ಅಂದರೆ ಕ್ರಿ.ಶ.೧೫೫೨–೬೫ರವರೆಗೂ, ಸದಾಶಿವನ ಅಧಿಕೃತ ಸ್ಥಾನಮಾನವನ್ನು ಮುಂದುವರಿಸಿ, ಸಾಮ್ರಾಜ್ಯವನ್ನು ತಾನೇ ಆಳಿದನು. ತಲೆತಲಾಂತರದಿಂದ ಬಂದ ನಿಷ್ಠಾವಂತ ಸೇವಕರನ್ನು ಅಧಿಕಾರದಿಂದ ಕೆಳಗಿಳಿಸಿ, ತನ್ನ ಜನರು, ಸಂಬಂಧಿಕರು ಹಾಗೂ ಕುಟುಂಬದ ಸದಸ್ಯರನ್ನು ನೇಮಕ ಮಾಡಿದನು. ಅಲ್ಲದೆ ಅನೇಕ ಮುಸಲ್ಮಾನರನ್ನು ಸೇನಾಪಡೆಯ ಸೇವೆಗೆ ತೆಗೆದುಕೊಂಡು, ಅವರಿಗೆ ಉನ್ನತ ಅಧಿಕಾರ ಹಾಗೂ ಹೊಣೆಗಾರಿಕೆಯುಕ್ತ ಸ್ಥಾನಮಾನಗಳನ್ನು ನೀಡಿದನು.

ಅಚ್ಯುತರಾಯ ಹಾಗೂ ಸದಾಶಿವರು ಸಿಂಹಾಸನವನ್ನು ಏರುವ ಸಮಯದಲ್ಲಿ ರಾಜಧಾನಿಯಲ್ಲಿದ್ದ ಗೊಂದಲಕ್ಕೆ ಒಂದು ಪ್ರಮುಖ ಕಾರಣವೆಂದರೆ, ಪೋರ್ಚುಗೀಸರು ತೋರಿದ ಆಕ್ರಮಣಕಾರಿ ಧೋರಣೆ. ಕ್ರಿ.ಶ.೧೫೪೩ರಲ್ಲಿ, ಪೋರ್ಚುಗೀಸ್ ರಾಜ್ಯಪಾಲನಾದ ಮಾರ್ಟಿನ್ ಆಲ್ಫೊನ್ಸೊ ಡಿ'ಸೋಜನು ಹಿಂದೂ ದೇವಾಲಯಗಳನ್ನು ಅಪವಿತ್ರಗೊಳಿಸಿ ಲೂಟಿ ಮಾಡುವಲ್ಲಿ ಆನಂದವನ್ನು ಪಡೆದನು. ಕಂಚಿಯ ದೇವಾಲಯವನ್ನು ಲೂಟಿ ಮಾಡುವ ಹುನ್ನಾರ ಮಾಡಿದ ಅವನನ್ನು, ರಾಮರಾಯನು ತಡೆದನು.ಚಂದ್ರಗಿರಿ ಪ್ರದೇಶ ಹಾಗೂ ಕೇರಳದಲ್ಲಿ ದಂಗೆಕೋರರನ್ನು ರಾಮರಾಯನು ಹತ್ತಿಕ್ಕಿದನು.

ಬಹಮನಿ ರಾಜ್ಯದ ಭಾಗವಾಗಿದ್ದ ನೆರೆಹೊರೆಯ ಮುಸಲ್ಮಾನರ ಬಗೆಗಿದ್ದ ರಾಮರಾಯನ ಧೋರಣೆಯು ಗಮನಿಸುವಂತಹುದು. ಅವರ ರಾಜಕೀಯದಲ್ಲಿ ಆತನು ಸಿಲುಕಿಕೊಂಡನು. ಅಹ್ಮದ್‌ನಗರದ ನಿಜ಼ಾಮ್ ಶಾಹಿ ಹಾಗೂ ಬಿಜಾಪುರದ ಆದಿಲ್ ಶಾಹಿ ಈ ಕಾಳಗಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರೆ, ಬೀದರ್‌ನ ಬರೀದ್ ಶಾಹಿ ಹಾಗೂ ಗೋಲ್ಕೊಂಡದ ಕುತುಬ್ ಶಾಹಿ ಶೃತಿ ಸೇರಿಸಿದರು. ಪ್ರಾರಂಭಿಕ ಹಂತದಲ್ಲಿ, ಬಿಜಾಪುರದ ವಿರುದ್ಧ ಅಹಮದ್‌ನಗರದೊಂದಿಗೆ ವಿಜಯನಗರವು ಸೇರಿಕೊಂಡಿತು, ಇದರ ಫಲವಾಗಿ ರಾಮರಾಯನು ರಾಯಚೂರು ಡೊಆಬ್‌ನನ್ನು ಪಡೆದರೆ ಕ್ರಿ.ಶ.೧೫೪೩ರಲ್ಲಿ ಬಿಜಾಪುರದಿಂದ ಶೋಲಾಪುರವನ್ನು ಅಹ್ಮದ್‌ನಗರವು ಪಡೆದುಕೊಂಡಿತು. ನಂತರ, ಬಿಜಾಪುರವು ಬೀದರ್‌ನೊಂದಿಗೆ ಮೈತ್ರಿ ಸಂಬಂಧವನ್ನು ಮಾಡಿಕೊಂಡಿತು, ಅಹ್ಮದ್‌ನಗರದ ವಿರುದ್ಧ ಮುನ್ನುಗ್ಗಿತು. ಕ್ರಿ.ಶ.೧೫೫೮ರಲ್ಲಿ ಆದಿಲ್ ಶಾಹಿ ಮಡಿದ ನಂತರ, ಆತನ ಉತ್ತರಾಧಿಕಾರಿಯಾದ ಅಲಿ ಆದಿಲ್ ಶಾಹಿಯು, ಕಳೆದುಕೊಂಡಿದ್ದ ಬಿಜಾಪುರ, ಕಲ್ಯಾಣ ಹಾಗೂ ಶೋಲಾಪುರಗಳನ್ನು ಹಿಂಪಡೆಯಲು, ರಾಮರಾಯನ ನೆರವನ್ನು ಬಯಸಿದನು. ಇದೇ ಸಮಯದಲ್ಲಿ, ರಾಮರಾಯನು ತನ್ನ ಸ್ವಂತ ಮಗನ ಸಾವಿನ ದುಃಖದಲ್ಲಿದ್ದನು.ಅವನು ಅಲಿಯನ್ನು ಆಸ್ಥಾನಕ್ಕೆ ಆಹ್ವಾನಿಸಿದನು. ಅಲಿಯು ಬಂದಾಗ, ಆತನನ್ನು ತನ್ನ ಸ್ವಂತ ಮಗನೆಂಬಂತೆ ಬರಮಾಡಿಕೊಂಡನು. ಅವರು ಒಪ್ಪಂದಕ್ಕೆ ಬಂದು, ಅದರಂತೆ ಅಲಿಯು ಕಳೆದುಕೊಂಡದ್ದನ್ನೆಲ್ಲ ರಾಮರಾಯನು ಹಿಂತಿರುಗಿ ಕೊಡಲು ನೆರವಾಗುವುದಕ್ಕೆ ಮುಂದಾದನು. ಹುಸೇನ್ ನಿಜ಼ಾಮ್ ಶಾಹಿಯು ಇಬ್ರಾಹಿಂ ಕುತುಬ್ ಶಾಹಿಯೊಂದಿಗೆ ಕೈಜೋಡಿಸಿದನು, ಆದರೆ, ಕ್ರಿ.ಶ.೧೫೫೯ರಲ್ಲಿ, ಗೋಲ್ಕೊಂಡ ಸುಲ್ತಾನನು ಅವನನ್ನು ತೊರೆದನು. ಹುಸೇನನನ್ನು ಸೋಲಿಸಲಾಯಿತು ಹಾಗೂ ಕ್ರಿ.ಶ.೧೫೬೧ರಲ್ಲಿ ಅವಮಾನಕರ ಸಂಧಾನಕ್ಕೆ ಅವನು ಒಪ್ಪಿಸಲ್ಪಟ್ಟನು. ಬಿಜಾಪುರವನ್ನು ಕಲ್ಯಾಣಕ್ಕೆ ಪುನಃ ಒಪ್ಪಿಸಲಾಯಿತು. ಆತ ಗೌರವ ಉಳಿಸಿಕೊಳ್ಳಲು, ತನ್ನ ಮಗಳಾದ ಬೀಬಿ ಜಾಮ್ಲಿಯನ್ನು ಮದುವೆ ಮಾಡಿಕೊಟ್ಟ ಹುಸೇನನು ಪುನಃ ಇಬ್ರಾಹಿಂ ಕುತುಬ್ ಶಾಹನ ನೆರವನ್ನು ಕೋರಿದನು. ಕ್ರಿ.ಶ.೧೫೬೨ರಲ್ಲಿ, ಒಟ್ಟಾಗಿ ಸೇರಿ ಕಲ್ಯಾಣಕ್ಕೆ ಮುತ್ತಿಗೆ ಹಾಕಿದರು, ಆದರೆ ಆದಿಲ್ ಶಾಹಿಯು ರಾಮರಾಯ, ಬಿರಾರ್‌ನ ಇಮಾದ್ ಶಾಹಿ ಹಾಗೂ ಅಲಿ ಬರಿದ್ ಶಾಹಿಗಳೊಡನೆ ದುರ್ಜಯಿ ಸಂಧಾನವನ್ನು ಮಾಡಿಕೊಂಡು ಹುಸೇನನನ್ನು ಸ್ವಾಧೀನಪಡಿಸಿಕೊಂಡು, ಆತನ ಪ್ರದೇಶವು ಕ್ರಿ.ಶ.೧೫೬೩ರಲ್ಲಿ ಧ್ವಂಸವಾಯಿತು.

ರಾಮರಾಯನು ತನ್ನ ಅಧಿಕಾರ ಹಾಗೂ ವೈಭವದ ಉತ್ತುಂಗದಲ್ಲಿದ್ದಾಗ ಅಲಿ ಆದಿಲ್ ಶಾಹಿಯು ಇಟಗೀರ್ (ಯಾದ್ಗೀರ್) ಹಾಗೂ ಬಾಗಲಕೋಟೆ ಜಿಲ್ಲೆಗಳನ್ನು ಕೋವಿಲ್ಕೊಂಡ ಹಾಗೂ ಪಣಗಲ್‌ನ ಕೋಟೆಗಳನ್ನು ಕುತುಬ್ ಶಾಹಿಯು ನೀಡುವಂತೆ ಬೇಡಿಕೆಯಿಟ್ಟನು(?). ಅವರು ನಿರಾಕರಿಸುವ ಸ್ಥಿತಿಯಲ್ಲಿರಲಿಲ್ಲ, ಹಾಗಾಗಿ, ತನ್ನ ನೈಸರ್ಗಿಕ ಗಡಿಯಾದ ಕೃಷ್ಣೆಯ ಆಚೆಗೂ ವಿಜಯನಗರವು ಹರಡಿತು. ಅವನಿಂದ ಆಣತಿಗಳನ್ನು ಪಡೆಯುವುದನ್ನು ತಪ್ಪಿಸಬೇಕಿದ್ದರೆ, ಸುಲ್ತಾನರು ಆತನ ವಿರುದ್ಧ ಎದ್ದು, ಆತನ ಸೇನಾ ಬಲವನ್ನು ನಿರ್ನಾಮ ಮಾಡಬೇಕಾಗಿತ್ತು. ಸಾಮಾನ್ಯವಾಗಿ ಸುಲ್ತಾನರು, ಹಾಗೂ ವಿಶೇಷವಾಗಿ ಅಲಿ ಆದಿಲ್ ಶಾಹಿಯು ಮುಸಲ್ಮಾನರ ವಿರುದ್ಧ ರಾಮರಾಯನ ಧೋರಣೆ, ಅಂದರೆ ಅವರನ್ನು ಕೆಟ್ಟದಾಗಿ ನಡೆಸಿಕೊಳ್ಳುವ ರೀತಿಯಿಂದ ಬೇಸತ್ತು ಹೋಗಿದ್ದರು ಎಂದು ಮುಸಲ್ಮಾನ ದಾಖಲೆಕಾರರು ದಾಖಲಿಸಿದ್ದಾರೆ ಎಂಬುದನ್ನಿಲ್ಲಿ ಗಮನಿಸಬೇಕು. ಕೆಲವು ವಿಷಯಗಳಲ್ಲಿ, ಆತನು ಕೌಟಿಲ್ಯನ ಅಂತರ-ರಾಜ್ಯ ಕಾರ್ಯನೀತಿಯನ್ನು ಪರಿಪಾಲಿಸಿದನು. ರಾಮರಾಯನೂ ಸೇರಿದಂತೆ, ವಿಜಯನಗರದ ಎಲ್ಲ ಅರಸರೂ ಮುಸಲ್ಮಾನರಿಗೆ ವಿಶೇಷ ಗಮನ ನೀಡಲಾಗಿದ್ದು, ಸೈನ್ಯದಲ್ಲಿ ಅನೇಕ ಮುಸಲ್ಮಾನ ಅಧಿಕಾರಿಗಳು ಹಾಗೂ ಸೈನಿಕರನ್ನು ನೇಮಕ ಮಾಡಿಕೊಳ್ಳಲಾಗಿತ್ತಲ್ಲದೇ ರಾಜಧಾನಿಯಲ್ಲಿ ಅವರಿಗಾಗಿ ಮಸೀದಿಯನ್ನೂ ನಿರ್ಮಿಸಲಾಗಿತ್ತು.

ಕೊನೆಗೂ, ರಾಮರಾಯನ ವಿರುದ್ಧ ಮೈತ್ರಿಕೂಟವನ್ನು ರೂಪಿಸಿಕೊಳ್ಳಲು ಸುಲ್ತಾನರು ನಿರ್ಧರಿಸಿದರು.ಮೈತ್ರಿಕೂಟವನ್ನು ವಿವಾಹ ಸಂಬಂಧದ ಮೂಲಕ ದೃಢಪಡಿಸಿಕೊಳ್ಳಲಾಯಿತು.

ನಿಜ಼ಾಮ್ ಶಾಹನು ತನ್ನ ತಂಗಿ ಚಾಂದ್ ಬೀಬಿಯನ್ನು ಅಲಿ ಆದಿಲ್ ಶಾಹನಿಗೆ ಮದುವೆ ಮಾಡಿಕೊಟ್ಟನು, ಅಲ್ಲದೆ, ಆದಿಲ್ ಶಾಹಿಯ ತಂಗಿಯನ್ನು ಹುಸೇನ್‌ನ ಮಗನಾದ ಮುರ್ತಾಜ಼ನು ಮದುವೆ ಮಾಡಿಕೊಂಡನು.ಇಬ್ರಾಹಿಂ ಕುತುಬ್ ಶಾಹಿಯು ಅದಾಗಲೇ ಹುಸೇನನ ಮಗಳನ್ನು ಮದುವೆಯಾಗಿದ್ದನು.ಬೀದರ್‌ನ ಅಲಿ ಬರಿದ್ ಶಾಹಿಯೂ ಸಹ ಒಕ್ಕೂಟವನ್ನು ಸೇರಿದನು. ಬೃಹತ್ ಸಂಖ್ಯೆಯ ಸೈನ್ಯವನ್ನು ಸಂಗ್ರಹಿಸಿ, ಬಿಜಾಪುರದಿಂದ ಕ್ರಿ.ಶ.೧೫೬೪ರ ಡಿಸೆಂಬರ್‌ನಲ್ಲಿ ವಿಜಯನಗರದ ವಿರುದ್ಧ ನಡೆದರು.ರಾಯಚೂರು ಹಾಗೂ ಮುದ್ಗಲ್‌ಗಳನ್ನು ಒಪ್ಪಿಸಲು ರಾಮರಾಯನು ನಿರಾಕರಿಸಿದ ಕಾರಣ, ಯುದ್ಧಕ್ಕೆ ಅದು ತಕ್ಷಣದ ಕಾರಣವಾಯಿತು. ಇಂತಹ ಕ್ರಮವನ್ನು ಎದುರುನೋಡಿದ್ದ ಚಾಣಾಕ್ಷನಾದ ರಾಮರಾಯನು, ತನಗೆ ಸಾಧ್ಯವಾಗುವ ಗರಿಷ್ಠ ಸಂಖ್ಯೆಯ ಸೈನ್ಯವನ್ನು ಸೇರಿಸಿದನು. ಫ಼ೆರಿಷ್ತಾನ ಪ್ರಕಾರ, ವಿಜಯನಗರದ ಸೈನ್ಯದಲ್ಲಿ ೭೦,೦೦೦ ಅಶ್ವಪಡೆ, ೯೦,೦೦೦ ಪದಾತಿ ದಳ, ಹಾಗೂ ೨,೦೦೦ ಆನೆಗಳಿದ್ದರೆ, ಹುಸೇನ್ ನಿಜ಼ಾಮ್ ಶಾಹನು ೬೦೦ ತುಪಾಕಿ ಬಂಡಿಗಳನ್ನು ಕಲೆ ಹಾಕಿದನು. ಪೋರ್ಚುಗಲ್‌ನ ಮೂಲಗಳು ಮೈತ್ರಿಕೂಟದ ಸೈನ್ಯದ ಬಲವನ್ನು ೫೦,೦೦೦ ಅಶ್ವಪಡೆ ಹಾಗೂ ೩,೦೦,೦೦೦ ಪದಾತಿ ದಳವನ್ನು ಹೊಂದಿತ್ತೆಂದು ಹೇಳಿದ್ದಾರೆ. ಹೆಚ್ಚಿನ ವಯಸ್ಸಾಗಿದ್ದರೂ, (೮೦ ವರ್ಷಗಳಿಗಿಂತ ಅಧಿಕ), ತನ್ನ ಸಹೋದರರಾದ ತಿರುಮಲ ಹಾಗೂ ವೆಂಕಟಾದ್ರಿಯ ನೆರವಿನೊಂದಿಗೆ, ಸ್ವತಃ ರಾಮರಾಯನೇ ಯುದ್ಧವನ್ನು ನಡೆಸಲು ಮುಂದಾದನು.ಎರಡು ಗ್ರಾಮಗಳಾದ ರಕ್ಕಸಗಿ ಹಾಗೂ ತಂಗಡಗಿಗಳ ನಡುವೆ ನಡೆದ, ನಂತರದ ಹಿಂದೂ ಕೃತಿಯಾದ ರಾಮಾಯಣ ಬಖೈರುವಿನಲ್ಲಿ ವಿವರಿಸಲಾದ ರಕ್ಕಸತಂಗಡಿ ಯುದ್ಧವು ನಡೆಯಿತು.ಮೂಲದಲ್ಲಿ, ಅದನ್ನು ತಾಳಿಕೋಟೆಯ ಯುದ್ಧವೆಂದು ಉಲ್ಲೇಖಿಸಲಾಗಿತ್ತು.

ಮೈತ್ರಿಕೂಟಗಳ ಧಾಳಿ ಹಾಗೂ ಫಿರಂಗಿಗಳ ಎಡಬಿಡದ ಗುಂಡಿನ ಕಾಳಗ ವಿಜಯನಗರದ ದಳದಲ್ಲಿ ಗೊಂದಲವನ್ನುಂಟುಮಾಡಿತು. ಈ ಸಂದರ್ಭದಲ್ಲಿ, ವಿಜಯನಗರ ಸೈನ್ಯದ ಇಬ್ಬರು ಮುಸಲ್ಮಾನ ಸೇನಾಧಿಪತಿಗಳು, ತಮ್ಮ ತುಕಡಿಗಳೊಂದಿಗೆ ಶತ್ರುಗಳೊಂದಿಗೆ ಸೇರಿಕೊಂಡರು. ಎಂದಿಗೂ ಆಶಾವಾದಿಯಾದ ರಾಮರಾಯನು, ತುಕಡಿಗಳ ಮಧ್ಯೆ ವೇಗವಾಗಿ ತನ್ನ ಪಲ್ಲಕ್ಕಿಯಲ್ಲಿ ಕುಳಿತು ಚಲಿಸುತ್ತಾ, ತನ್ನ ಸೈನಿಕರನ್ನು ಹುರಿದುಂಬಿಸಿದನು. ದುರಾದೃಷ್ಟವಶಾತ್, ಕೋಪಾವೇಶಗೊಂಡಿದ್ದ ಆನೆಯೊಂದು ಎದುರಾದಾಗ, ಅವನ ಪಲ್ಲಕ್ಕಿ ಹೊರುವವರು ಜೀವಕ್ಕೆ ಬೆದರಿ ರಾಮರಾಯನನ್ನು ಒಂಟಿಯಾಗಿ ಬಿಟ್ಟು ಓಡಿಹೋದರು. ಅವನನ್ನು ಸೆರೆಹಿಡಿದಾಗ ಹುಸೇನ್ ನಿಜ಼ಾಮ್ ಶಾಹಿಯು ಶಿರಚ್ಛೇದನ ಮಾಡಿದನು. ತರಿದ ಶಿರವನ್ನು ಉದ್ದನೆಯ ಈಟಿಗೆ ಸಿಕ್ಕಿಸಿ, ಯುದ್ಧಭೂಮಿಯಲ್ಲಿ ಮೆರವಣಿಗೆ ಮಾಡಲಾಯಿತು. ಭಯಭೀತಗೊಂಡ ವಿಜಯನಗರದ ಸೈನ್ಯವು, ಚೆಲ್ಲಾಪಿಲ್ಲಿಯಾಯಿತು. ಭಾರತೀಯ ಇತಿಹಾಸದ ಪುಟಗಳಲ್ಲಿ ನಡೆದ ಅತ್ಯಂತ ಭೀಕರ ಹಾಗೂ ನಿರ್ಣಾಯಕ ಯುದ್ಧವಾಗಿದ್ದ ಅದು, ರಾಜ್ಯದ ತಿರುವನ್ನೇ ಬದಲಾಯಿಸಿತು.

ರಾಮರಾಯನ ಸಹೋದರನಾದ ತಿರುಮಲನು ರಾಜಧಾನಿಗೆ ಹಿಂತಿರುಗಿ, ಅರಮನೆಯ ಎಲ್ಲ ಸಿರಿ-ಸಂಪತ್ತುಗಳನ್ನು, ಚಿನ್ನ, ಒಡವೆಗಳೂ ಸೇರಿದಂತೆ, ರತ್ನಖಚಿತ ಸಿಂಹಾಸನವನ್ನೂ ತೆಗೆದುಕೊಂಡು, ಅದನ್ನು ನೂರಾರು ಆನೆಗಳ ಮೇಲೆ ಹೇರಿ, ಚಂದ್ರಗಿರಿಗೆ ತೆಗೆದುಕೊಂಡು ಹೋದನು, ಆತನು ಕಾನೂನುರೀತ್ಯಾ ರಾಜನಾದ ಸದಾಶಿವನನ್ನೂ ಕರೆದೊಯ್ದನು. ವಿಜಯನಗರದ ಮೇಲಿನ ಮರೆತುಹೋದ ಸಾಮ್ರಾಜ್ಯ - 'ಎ ಫರ್ಗಾಟನ್ ಎಂಪೈರ್' ಎಂಬ ರಾಬರ್ಟ್ ಸಿವೆಲ್ ಬರೆದ ಪುಸ್ತಕದಲ್ಲಿ, ನಂತರದ ಘಟನೆಗಳನ್ನು ಹೀಗೆ ವಿವರಿಸಲಾಗಿದೆ: ದಿನಗಳು ಉರುಳಿದಂತೆ, ಅಗ್ನಿ ಹಾಗೂ ಖಡ್ಗ ಹಿಡಿದು, ಹಾರೆ ಹಾಗೂ ಕೊಡಲಿಗಳನ್ನು ಹೊತ್ತು, ಅವರು ವಿನಾಶದ ತಾಂಡವವನ್ನು ಮುಂದುವರಿಸಿದರು. ಬಹುಶಃ ವಿಶ್ವದ ಇತಿಹಾಸದಲ್ಲೇ ಕಂಡು ಕೇಳರಿಯದ ವಿನಾಶವನ್ನು ಇಂತಹ ಭವ್ಯವಾದ ನಗರದ ಮೇಲೆ ಎಸಗಿದರು." ಪರಿಸ್ಥಿತಿಯ ಪ್ರಯೋಜನ ಪಡೆದ ಕಳ್ಳ-ಕಾಕರು ಹಾಗೂ ಕೊಲೆಗಡುಕರು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದರು. ಬೇಗನೆ, ವಿಜಯನಗರವು ಅವನತಿಯ ರಾಶಿಯಾಯಿತು, ಹಾಗೂ ಇಂದಿಗೂ ಅದು ಹಾಗೆಯೇ ಅಳಿದು ಉಳಿದಿದೆ.

ವಿಜಯನಗರ ರಾಜವಂಶದ ೨೩೦ ವರ್ಷಗಳ ಆಳ್ವಿಕೆಯು, ಕರ್ನಾಟಕ ಮಾತ್ರವಲ್ಲದೆ, ದಕ್ಷಿಣ ಭಾರತದ ಇತಿಹಾಸದಲ್ಲಿ ಒಂದು ಪರ್ವವೇ ಆಗಿದೆ. ಇದು, ಬಾದಾಮಿಯಲ್ಲಿ ಚಾಲುಕ್ಯರು ಕ್ರಿ.ಶ.೬ನೆಯ ಶತಮಾನದಿಂದ ಮೊದಲ್ಗೊಂಡ ರಾಜ್ಯಗಳ ಸರಣಿಯ ಪರಾಕಾಷ್ಠೆಯ ಹಾಗೂ ಉತ್ತುಂಗದ ಗುರುತಾಗಿದೆ. ಭಾರತೀಯ ಮೌಲ್ಯಗಳನ್ನು ಉಳಿಸಿ ಸಂರಕ್ಷಿಸುವ ಆಂದೋಲನದ ಸ್ಥೂಲ ಪರಿಣಾಮದ ಫಲವಾಗಿ ಮೂಡಿಬಂದ ಸಾಮ್ರಾಜ್ಯವು, ದೇಶವನ್ನು ಸ್ವತಂತ್ರ ಹಾಗೂ ಬಂಧಮುಕ್ತವಾಗಿಸುವ ತನ್ನ ಗುರಿಯಲ್ಲಿ ಯಶಸ್ವಿಯಾಯಿತು. ಇದನ್ನು ಅಂತಿಮ ಹಿಂದೂ ರಾಜ್ಯವೆಂದು ವಿವರಿಸಲಾಗಿದ್ದರೂ, ಈ ಅವಧಿಯು ಪ್ರಾದೇಶಿಕತೆ ಹಾಗೂ ಕೋಮುವಾದದಿಂದ ಮುಕ್ತವಾಗಿ, ಪ್ರಾಂತ, ಕುಲ ಹಾಗೂ ಧರ್ಮಗಳ ಸಂಕುಚಿತ ತಡೆಗಳನ್ನು ಮೀರಿ ಬೆಳೆದಿತ್ತು. ಇದರ ಬಹುತೇಕ ಅರಸರು ಉನ್ನತ ಆದರ್ಶ ಹಾಗೂ ದೃಢ ಕ್ರಿಯೆಗಳುಳ್ಳ, ಧರ್ಮಪ್ರಚಾರಕ ಹುಮ್ಮಸ್ಸಿನಿಂದ ಹಾಗೂ ಉದ್ದಿಷ್ಟಪೂರ್ಣ ನಾಯಕತ್ವವನ್ನು ರೂಢಿಸಿಕೊಂಡಿದ್ದರು. ವಿಜಯನಗರವು ತನ್ನ ಧೀರೋದಾತ್ತ ಚಿಂತನೆಗಳಿಗೆ ಬದ್ಧವಾಗಿ, ಅದನ್ನು ಬದ್ಧತೆ ಹಾಗೂ ಎಡೆಬಿಡದ ಯತ್ನಗಳ ಮೂಲಕ ಸಾಧಿಸಿತು.

ಅಮೋಘ ಶ್ರೀಮಂತಿಕೆಯನ್ನು ಹೊಂದಿದ್ದ ಈ ಸಾಮ್ರಾಜ್ಯವು, ಉತ್ತಮವಾಗಿ ಸ್ಥಾಪಿತವಾದ ಸರ್ಕಾರ, ಸಮರ್ಥ ಆಡಳಿತ ಸಂಸ್ಥೆಗಳ ಮೂಲಕ ಆಂತರಿಕ ಶಾಂತಿ ಹಾಗೂ ಸುರಕ್ಷತೆಯನ್ನು ಹೊಂದಿತ್ತು. ಪ್ರಜೆಗಳ ಯೋಗಕ್ಷೇಮ ಹಾಗೂ ಪ್ರಗತಿ, ಕೃಷಿ ಬೆಳವಣಿಗೆ, ಸಮೃದ್ಧ ವ್ಯಾಪಾರ ಹಾಗೂ ಉದ್ಯಮ, ಪಟ್ಟಣ ಹಾಗೂ ನಗರಗಳ ಬೆಳವಣಿಗೆ, ಧರ್ಮವನ್ನಾಚರಿಸುವ ಸ್ವಾತಂತ್ರ್ಯ, ಶಿಕ್ಷಣ ಮತ್ತು ಕಲಿಕೆಯ ಸೌಲಭ್ಯಗಳನ್ನು ಒದಗಿಸಿತು. ಹತ್ತಿರದ ಹಾಗೂ ದೂರದ ದೇಶಗಳು, ಅಂದರೆ ಪೂರ್ವದಿಂದ ಪಶ್ಚಿಮದವರೆಗೂ ಇರುವ ಪರ್ಶಿಯಾ, ಅರೇಬಿಯಾ, ಈಜಿಪ್ಟ್, ಇಟಲಿ, ಪೋರ್ಚುಗಲ್, ಸಿಲೋನ್, ಬರ್ಮಾ ಹಾಗೂ ಚೀನಾದಂತಹ ದೇಶಗಳೊಡನೆ ರಾಯಭಾರ ಸಂಬಂಧವನ್ನೂ ಹೊಂದಿತ್ತು. ರಾಜ್ಯದ ಕರಾವಳಿಯಲ್ಲಿ ಸಣ್ಣ ನೌಕಾಪಡೆ ಹಾಗೂ ಹಡಗುಗಳನ್ನು ಹೊಂದಿದ್ದು ಸಾಗರೋತ್ತರ ವ್ಯಾಪಾರವನ್ನು ಹೊಂದಿತ್ತು. ಅಬ್ದುರ್ ರಜ಼ಾಕ್, ನೂನಿಜ಼್ ಹಾಗೂ

ಡಾಮಿನಿಕ್ ಪೇಸ್‌ನಂತಹ ವಿದೇಶೀ ಪ್ರವಾಸಿಗರು, ವಿಜಯನಗರ ಸಾಮ್ರಾಜ್ಯ ಹಾಗೂ ನಗರದ ವೈಭವವನ್ನು ಸವಿಸ್ತಾರವಾಗಿ ಬಣ್ಣಿಸಿದ್ದಾರೆ. ರಾಜಧಾನಿಯ ವೈಭವ, ವಿಸ್ತಾರವಾದ ಆಯಾಮದಲ್ಲಿ ಯೋಜಿತ ಅಭಿವೃದ್ಧಿ, ದಟ್ಟ ಜನಸಂಖ್ಯೆ, ಐಶಾರಾಮಿ ಜೀವನ, ಅಪಾರವಾದ ಸಂಪತ್ತು, ವಿಸ್ತೃತವಾದ ವಾಣಿಜ್ಯ ಸಂಬಂಧ ಹಾಗೂ ಸೇನಾ ಬಲಗಳನ್ನು ಪರಮೋಚ್ಚ ವಾಕ್ಯಗಳಲ್ಲಿ ಈ ಯಾತ್ರಿಕರು ಹೊಗಳಿದ್ದಾರೆ. ರಾಜರು ಅತ್ಯಂತ ಮುಕ್ತ ಧಾರ್ಮಿಕ ಕಾರ್ಯನೀತಿಯನ್ನು ಅನುಸರಿಸುತ್ತಿದ್ದರೆಂದು ಕ್ರಿ.ಶ.೧೫೧೪ರಲ್ಲಿ ಭಾರತೀಯ ಅಧಿಕಾರಿ ಹಾಗೂ ಪೋರ್ಚುಗೀಸ್ ಲೇಖಕನಾದ ಡ್ಯುಆರ್ಟ್ ಬಾರ್ಬೋಸನು ರುಜುವಾತುಪಡಿಸಿದ್ದಾನೆ. ಆತನು, ಕ್ರಿಶ್ಚಿಯನ್, ಯಹೂದಿ, ಮೂರ್ ಅಥವಾ ಏಡನ್ ಆಗಿರಲಿ, ಯಾವುದೇ ರೀತಿಯ ಕಿರಿಕಿರಿ ಹಾಗೂ ವಿಚಾರಣೆಗೆ ಒಳಗಾಗದೆ, ತನ್ನ ನಂಬಿಕೆಗಳಿಗೆ ಅನುಸಾರವಾಗಿ, ಪ್ರತಿಯೊಬ್ಬ ಮನುಷ್ಯನೂ ಬಂದು ಹೋಗಿ ಮಾಡುವ ಹಾಗೂ ಜೀವಿಸುವ ಸ್ವಾತಂತ್ರಕ್ಕೆ ರಾಜನು ಅವಕಾಶ ನೀಡುತ್ತಾನೆ," ಎಂದು ಬರೆದಿದ್ದಾನೆ.

ಭಾಷೆ ಹಾಗೂ ಸಾಹಿತ್ಯ, ಕಲೆ, ವಾಸ್ತುಶಿಲ್ಪ, ಸಂಗೀತ ಹಾಗೂ ಕುಶಲ ಕಲೆಗಳಿಗೆ ಆಶ್ರಯ ನೀಡಲಾಯಿತು.ಆ ಕಾಲದ ಹೆಸರಾಂತ ಕನ್ನಡ ಕವಿಗಳ ಪೈಕಿ, ಕುಮಾರವ್ಯಾಸ, ಚಾಮರಸ, ರತ್ನಾಕರವರ್ಣಿ, ಪುರಂದರದಾಸ ಹಾಗೂ ಕನಕದಾಸರೂ ಸೇರಿದ್ದಾರೆ. ಸಂಸ್ಕೃತ ಕಲಿಕೆ ಹಾಗೂ ಭಾಷ್ಯಗಳು ಹಾಗೂ ಮೂಲ ಕೃತಿಗಳ ರಚನೆಗೆ ಪ್ರಚೋದನೆಯನ್ನು ನೀಡಲಾಯಿತು. ಒಂದನೆಯ ಬುಕ್ಕ ಹಾಗೂ ಇಮ್ಮಡಿ ಹರಿಹರರು ವೈದಿಕ ಸಂಸ್ಕೃತಿಯ ಮೇಲೆ ಭಾಷ್ಯಗಳನ್ನು ಬರೆಸಿದರು. ಸಾಯಣ, ವಿದ್ಯಾರಣ್ಯ, ಮಾಧವಮಂತ್ರಿ ಹಾಗೂ ವೇದಾಂತದೇಶಿಕರಂತಹ ಮಹಾನ್ ಲೇಖಕರ ಕಾಲವದು.ಕನ್ನಡ ಹಾಗೂ ಸಂಸ್ಕೃತಗಳೆರಡರಲ್ಲೂ ಗಣನೀಯ ಸಂಖ್ಯೆಯಲ್ಲಿ ಸಾಹಿತ್ಯ ರಚನೆಯಾಯಿತು. ಆ ಪ್ರಕಾರ ಗಂಗಾದೇವಿ, ಅಭಿರಾಮ ಕಾಮಾಕ್ಷಿ ಹಾಗೂ ತಿರುಮಲಾಂಬರ ಕೊಡುಗೆಯನ್ನು ಇಲ್ಲಿ ಸ್ಮರಿಸಬೇಕು.

ವಿಜಯನಗರದ ಕಾಲದಲ್ಲಿ, ಕಲೆ ಹಾಗೂ ವಾಸ್ತು ನಿರ್ಮಾಣಕ್ಕೆ ಸಂಬಂಧಿಸಿದಂತೆ, ಅರಮನೆಗಳು ಹಾಗೂ ಸಾರ್ವಜನಿಕ ಕಟ್ಟಡಗಳಂತಹ ಜಾತ್ಯಾತೀತ ನಿರ್ಮಾಣಗಳಿಗೆ ಕಡಿಮೆ ಪ್ರಾಶಸ್ತ್ಯವನ್ನು ನೀಡಲಾಗುತ್ತಿತ್ತು. ಆದರೂ, ಈ ಅವಧಿಯಲ್ಲಿ, ಕೋಟೆಗಳಂತಹ ಅನೇಕ ಜಾತ್ಯಾತೀತ ಕಟ್ಟಡಗಳ ನಿರ್ಮಾಣವಾಯಿತು. ರಾಜಧಾನಿಯಲ್ಲಿ, ಆನೆಲಾಯ, ಮಾರುಕಟ್ಟೆ ಸ್ಥಳಗಳು, ಮಹಾರಾಣಿಯರಿಗೆ ಅರಮನೆಗಳು, ರಾಜನು ಆಸ್ಥಾನ ನಡೆಸುತ್ತಿದ್ದ ಅಧಿಕೃತ ಕಟ್ಟಡಗಳಂತಹ ನಿರ್ಮಾಣಗಳನ್ನು ಮಾಡಲಾಯಿತು. ವಿಜಯನಗದ ಕಟ್ಟಡ ನಿರ್ಮಾಣ ಶೈಲಿಯು (ವಾಸ್ತು) ಚಾಲುಕ್ಯ, ಹೊಯ್ಸಳ ಹಾಗೂ ದ್ರಾವಿಡ ಅಂಶಗಳ ಮಿಶ್ರಣವಾಗಿದ್ದು, ಅದರದೇ ಆದ ಉದ್ದ, ಅಗಲ ಹಾಗೂ ಎತ್ತರದ ಔನ್ನತ್ಯಗಳ ಯೋಜನೆ ಹಾಗೂ ಭಾವನಾ ಶಾಸ್ತ್ರವನ್ನು ಪ್ರತಿಬಿಂಬಿಸಿತು. ಗೋಪುರಗಳು, ಅಂದರೆ ರಾಜಗೋಪುರಗಳೆಂದು ಹೆಚ್ಚು ಜನಪ್ರಿಯವಾಗಿ ಕರೆಯಲಾಗುವ, ಮಹೋನ್ನತ ಎತ್ತರಕ್ಕೆ ಏರಿದ ರಚನೆಗಳು, ವಿಜಯನಗರ ಕಟ್ಟಡ ನಿರ್ಮಾಣ ಶೈಲಿಯ ವೈಶಿಷ್ಟ್ಯಪೂರ್ಣ ಅಂಶವಾಗಿತ್ತು. ಅಳವಡಿಸಿಕೊಳ್ಳಲಾದ ನೂತನ ಕಟ್ಟಡ ನಿರ್ಮಾಣ ಶೈಲಿಯು, ಭಾರತೀಯ ಕಟ್ಟಡ ನಿರ್ಮಾಣವನ್ನು ಕುರಿತಂತೆ ಬರೆದ ಲೇಖಕನಾದ ಪರ್ಸಿ ಬ್ರೌನ್‌ನ ಪ್ರಕಾರ, "ಇದು, ಜನರ ರಸಾಭಿಜ್ಞತೆಯ ಆಕಾಂಕ್ಷೆಗಳಿಗೆ ನಿರ್ದಿಷ್ಟ ಸ್ವಾತಂತ್ರ್ಯ ಹಾಗೂ ಲಾಲಿತ್ಯದಿಂದ ಕೂಡಿದ ಅಭಿವ್ಯಕ್ತತೆಯತ್ತ ಹೆಜ್ಜೆಹಾಕಿ, ಹೆಚ್ಚಿನ ಪರಿಪೂರ್ಣತೆಯನ್ನು ಅನುಭವಿಸುವ ಜೀವನವನ್ನು ಪಡೆದಿರುವ ಸಂಕೇತವಾಗಿದೆ. ಈ ಹಂತದ ಅಭಿವೃದ್ಧಿಯಲ್ಲಿರುವ ಕಟ್ಟಡ ನಿರ್ಮಾಣವು ಆಡಂಬರದ ವೈಭವದ ಅತ್ಯುನ್ನತ ಪರಾಕಾಷ್ಠೆಯನ್ನು ತಲುಪಿದೆ. ವಿಸ್ತೃತ ಶ್ರೇಣಿಯ ಆದರ್ಶ, ಸಂವೇದನೆ, ಭಾವನೆ, ದುಂದುಗಾರಿಕೆ, ಅಸಾಮಾನ್ಯತೆ, ಆಕಾರ ಹಾಗೂ ನಿರಾಕಾರತೆಗಳ ವೈಪರೀತ್ಯ ಹಾಗೂ ವಿಚಿತ್ರತೆಗಳ ಕಲ್ಲಿನಲ್ಲಿ ಮೂಡಿದ ದಾಖಲೆಯಾಗಿದ್ದು, ಕೇವಲ ಅಮೋಘವಾದ ಕ್ರಿಯಾತ್ಮಕ ಮನಸ್ಸು ಮೂಡಿಸಬಹುದಾದ ಹಾಗೂ ಪ್ರೇರಿತ ಕಲಾವಿದನು ಮೂಡಿಸಬಹುದಾದ ಕಲೆಯಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾನೆ.

## ನಂತರದ ಕಾಲ

ರಕ್ಕಸಗಿ–ತಂಗಡಗಿಯ (ರಕ್ಕಸತಂಗಡಿ) ಯುದ್ಧವು ಪರಮೋಚ್ಚ ದುರಂತವೂ, ಭರಿಸಲಾರದ ಮಹಾವಿನಾಶವಾಗಿತ್ತು. ನಾಯಕನ ಸಾವು, ಸಾಮ್ರಾಜ್ಯದ ನಿರ್ನಾಮವನ್ನೇ ತಂದಿತು. ಎಲ್ಲಾ ಸಿದ್ಧಾಂತ, ಪಾಂಡಿತ್ಯ, ಕಲೆ ಹಾಗೂ ಸುಸಂಸ್ಕೃತತೆ ಹಾಗೂ ಆನಂದ ಪರವಶತೆಯನ್ನು, ಬಾಡಿಹೋಗದ ಸಂಪತ್ತು ಹಾಗೂ ಬೌದ್ಧಿಕತೆಯ ಖನಿಯನ್ನೇ ತನ್ನದಾಗಿಸಿಕೊಂಡ ಸಾಮ್ರಾಜ್ಯಶಾಹಿ ವಿಜಯನಗರವು, ತುಂಗೆಯ ದಡದಲ್ಲಿ ಪಳೆಯುಳಿಕೆಗಳ ರಾಶಿಯಾಗಿ ಬಿದ್ದಿವೆ. ವಿಜಯನಗರವು ಧರ್ಮ ರಾಜ್ಯವನ್ನು ನಿರ್ಮಾಣ ಮಾಡಲು ಜನರನ್ನು ಪ್ರೇರೇಪಿಸಿದ ಯೋಗಿಯ ಕೈಗಳಲ್ಲಿ, ಜೀವನ ಹಾಗೂ ಮರಣ, ಆದಾಯ ಹಾಗೂ ಸೈನ್ಯಗಳ ಬಲವನ್ನು ಒಪ್ಪಿಸಿತ್ತು. ಆ ಜನರಿಗೆ, ವಿಜಯನಗರದ ಪ್ರತಿಯೊಂದು ಕಲ್ಲೂ ಪವಿತ್ರವೇ, ಅವರು ಕೈಗೊಂಡ ಪ್ರತಿಯೊಂದು ಕಾರ್ಯವೂ, ರಾಜಧಾನಿಯ ಪರಮದೇವರಾದ ವಿರೂಪಾಕ್ಷನಿಗೆ ಅರ್ಪಣೆಯೇ. ನಗರವು, ಅದರ ಸಂಸ್ಥಾಪಕನಿಗೆ ಹಾಗೂ ಜನರಿಗೆ, ಅವರನ್ನು ಶಾಂತಿಯುತವಾಗಿ ಆಳಲು ದೇವ–ನಿಯಮಿತ ರಾಜಪ್ರಭುತ್ವದ ಬಾಹ್ಯ ಪ್ರತೀಕವೂ ಹಾಗೂ ಭೂನಿವಾಸವೂ ಆಗಿದ್ದಿತು.

ಮೂರು ಶತಮಾನಗಳ ನಂತರ, ಸಾಮ್ರಾಜ್ಯ ಸ್ಥಾಪನೆಗೆ ಪ್ರೇರಣೆಯಾಗಿ ಆದರ್ಶವಾದವು ಭ್ರಮೆಯಾಗಿ ಪರಿಣಮಿಸಿತು. ನಗರವು, ಕೆತ್ತನೆ ಮಾಡಿದ ಕಲ್ಲುಗಳು, ಒಡೆದ ಗೋಡೆಗಳು, ನಾಶವಾದ ದೇವಾಲಯಗಳು, ವಿಜಯ ಕಮಾನುಗಳ ಅಡಿಯಲ್ಲಿ ಇರುವ ವಿಶಾಲವಾದ ಕಮಾನುಚಾವಣಿಗಳು, ರಥದ ಚಕ್ರಗಳ ಗುರುತುಗಳನ್ನು ಹೊತ್ತ ಅಡ್ಡಾದಿಡ್ಡಿಯಾದ ಹಾಗೂ ಭಗ್ನಗೊಂಡ ವಿಗ್ರಹಗಳಿಂದ ತುಂಬಿದ ಪಾದಚಾರಿ ಮಾರ್ಗಗಳ ಸಂಗ್ರಹಾಲಯವಾಯಿತು. ಅದರ ಸಂಸ್ಥಾಪಕರ ಪ್ರತಿಮೆಗಳಿಗೆ ದೇಗುಲಗಳನ್ನು ನಿರ್ಮಿಸುವುದಾಗಲಿ, ಅಥವಾ ದೀಪವನ್ನು ಹಚ್ಚುವುದಾಗಲಿ, ಅಥವಾ ಪ್ರತಿಮೆಗಳಿಗೆ ಹೂಮಾಲೆಗಳನ್ನು ಹಾಕುವುದಾಗಲಿ ಅಥವಾ ಅವರ ಹುಟ್ಟುಹಬ್ಬ ಹಾಗೂ ಪುಣ್ಯತಿಥಿಗಳನ್ನು ಶಾಸ್ತ್ರೋಕ್ತ ಹಬ್ಬ ಹಾಗೂ ವೈಭವೋಪೇತ ಹೊಗಳಿಕೆಗಳನ್ನು, ಯಾರೂ ಮಾಡುವುದಿಲ್ಲ. ಈ ಪಾಳುಬಿದ್ದ ರಾಶಿಗಳು ತಮ್ಮದೇ ಆದ ಕಥೆಯನ್ನು ಹೇಳುತ್ತವೆ.



ಬೀದರ್ ಕೋಟೆ



ಮಹಮದ್ ಗವಾನ್ ಮದ್ರಸಾ, ಬೀದರ್



ಖ್ವಾಜಾ ಬಂದೇ ನವಾಜ್ ದರ್ಗಾ, ಗುಲಬರ್ಗಾ



ಗೋಳ ಗುಮ್ಮಟ ಬಿಜಾಪುರ ಜಿಲ್ಲೆ

### ಅರವೀಡು ರಾಜವಂಶ

ಕ್ರಿ.ಶ.೧೫೬೫ರ ದುರಂತದ ನಂತರ, ವಿಜಯನಗರ ಸಾಮ್ರಾಜ್ಯವು ಒಟ್ಟಾರೆಯಾಗಿ ಮಾಯವಾಗಲಿಲ್ಲ. ತಿರುಮಲನು ಸಾಮ್ರಾಜ್ಯವನ್ನು ಪುನರುಜ್ಜೀವನಗೊಳಿಸಿದರೂ, ಯಶಸ್ವಿಯಾಗಲಿಲ್ಲ. ಮೊದಲನೆಯದಾಗಿ, ಸೆರೆಯಲ್ಲಿ ದುಃಸ್ಥಿತಿಯಲ್ಲಿದ್ದ ಸದಾಶಿವನ ಹೆಸರಿನಲ್ಲಿ ಆತನು ಆಳುತ್ತಿದ್ದನು, ಆದರೆ ಕ್ರಿ.ಶ.೧೫೭೦ರಲ್ಲಿ, ತಾನೇ ರಾಜನಾದನು. ಈ ಮೊದಲಿನ ಆಘಾತಗಳು ಆತನನ್ನು ವಿವೇಕವುಳ್ಳವನಾಗಿ ಮಾಡಲಿಲ್ಲ ಅವನ ಕಷ್ಟದ ಸಮಯದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸುಲ್ತಾನರ ನೆರವನ್ನು ಅರಸುತ್ತಿದ್ದನು. ಅದರ ಫಲವಾಗಿ, ಮುಸಲ್ಮಾನ ಧಾಳಿಗಳ ಭಯಾನಕ ಅನುಭವಗಳನ್ನು ಮತ್ತೆಮತ್ತೆ ಎದುರಿಸಿದ ಅಸಂತುಷ್ಟ ಜನರು ಅನುಭವಿಸಬೇಕಾಯಿತು. ಮಧುರೆ, ತಂಜಾವೂರು ಹಾಗೂ ಜಿಂಜಿಯಂತಹ ಮುಖ್ಯ ಸಾಮಂತರು, ಸಾಮ್ರಾಜ್ಯದಿಂದ ದೂರವಾಗಿ, ಸ್ವಾತಂತ್ರ್ಯವನ್ನು ಘೋಷಿಸಿದರು. ದೇಶದ ಬಹುತೇಕ ಭಾಗಗಳು ಅವರ ವಿಧ್ವಂಸಕತೆಗಳಿಂದ ಹೀನಾಯವಾಗಿ ಕಷ್ಟ ಪಡಬೇಕಾಯಿತು. ಪೆನುಕೊಂಡದಲ್ಲಿದ್ದ ಅದರ ರಾಜಧಾನಿಯಿಂದ ನಡೆಸುತ್ತಿದ್ದ ಸಾಮ್ರಾಜ್ಯದ ಛಾಯೆಯು, ಅವರನ್ನು ತಡೆಯಲಾಗಲಿಲ್ಲ. ಪೆನುಕೊಂಡದ ಸಾಮ್ರಾಟನಿಗೆ ನಿಷ್ಠೆ ತೋರಿದ ಸಾಮಂತರೆಂದರೆ ಕೆಳದಿಯ ಹಾಗೂ ವೆಲ್ಲೂರಿನ ನಾಯಕರು ಹಾಗೂ ಮೈಸೂರಿನ ಒಡೆಯರ್‌ಗಳಾಗಿದ್ದರು. ಕನ್ನಡ, ತಮಿಳು ಹಾಗೂ ತೆಲುಗು ಪ್ರದೇಶಗಳಲ್ಲಿ ನೂತನ ಪ್ರಾಂತಗಳನ್ನು ಸೃಷ್ಟಿಸುವ ಮೂಲಕ, ಈ ವ್ಯವಹಾರಗಳನ್ನು ಸರಿಪಡಿಸಲು ತಿರುಮಲನು ಪ್ರಯತ್ನಿಸಿದನು. ತಿರುಮಲನ ನಂತರ, ಶ್ರೀರಂಗರಾಯನು ಸಿಂಹಾಸನವನ್ನು ಏರಿ ಸಾಮ್ರಾಜ್ಯವನ್ನು ಒಟ್ಟಾಗಿ ಇರಿಸಲು ಶತಪ್ರಯತ್ನವನ್ನು ಮಾಡಿದನು. ಈ ಸಮಯದಲ್ಲಿ, ಮರಾಠರು ಬಲಗೊಳ್ಳುತ್ತಿದ್ದು ಅವರ ಪೈಕಿ ಕೆಲವು ನಾಯಕರು, ತಮ್ಮ ಹಿತಾಸಕ್ತಿಯನ್ನು ಪೂರೈಸಿಕೊಳ್ಳಲು, ಹಿಂದೂ ಸಾಮ್ರಾಜ್ಯದಲ್ಲಿ ಉಂಟಾಗಿದ್ದ ಗೊಂದಲದ ಪ್ರಯೋಜನವನ್ನು ಪಡೆದುಕೊಳ್ಳಲು ಹಿಂದೇಟು ಹಾಕಲಿಲ್ಲ. ಮುರಾರಿ ರಾವ್ ಎಂಬ ಮರಾಠಿ ಬ್ರಾಹ್ಮಣನು, ಕ್ರಿ.ಶ ೧೫೮೯ರಲ್ಲಿ ಅಹೋಬಲಂನ ನರಸಿಂಹಸ್ವಾಮಿ ದೇವಾಲಯವನ್ನು ಲೂಟಿ ಮಾಡುವ ಮಟ್ಟಕ್ಕೆ ಹೋದನು.

ಶ್ರೀರಂಗನ ಉತ್ತರಾಧಿಕಾರಿಯಾದ ವೆಂಕಟಪತಿರಾಯನೂ ಸಹ, ಮುಸಲ್ಮಾನ ಧಾಳಿಗಳಿಂದ ಅತ್ಯಧಿಕವಾಗಿ ಬಳಲಿದ ಉತ್ತರದ ಜಿಲ್ಲೆಗಳ ರೈತರಿಗೆ ಭೂ ಹಿಡುವಳಿಗಳ ಸುಲಭವಾದ ಪರಿಸ್ಥಿತಿಗಳನ್ನು ನೀಡುವ ಮೂಲಕ, ಸಾಮ್ರಾಜ್ಯವನ್ನು ಉಳಿಸುವ ಪ್ರಯತ್ನವನ್ನೂ ಮಾಡಿದನು.ಪ್ರಾರಂಭಿಕ ದಿನಗಳಲ್ಲಿ ಗ್ರಾಮೀಣ ಜೀವನಕ್ಕೆ ಸ್ಥಿರತೆಯನ್ನು ನೀಡುವ ಸ್ಥಳೀಯ ಆಡಳಿತ ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸುವ ಪ್ರಯತ್ನವನ್ನೂ ಮಾಡಿದನು. ಪಶ್ಚಿಮ ಕರಾವಳಿಯಲ್ಲಿ ಪೋರ್ಚುಗೀಸರ ಇರುವಿಕೆ, ಸ್ಥಳೀಯ ಅರಸರೊಂದಿಗೆ ಅವರು ವ್ಯವಹರಿಸುವ ಅನೈತಿಕ ವಿಧಾನಗಳು, ಕ್ರಿಶ್ಚಿಯನ್ ಧರ್ಮಕ್ಕೆ ಜನರನ್ನು ಮತಾಂತರಗೊಳಿಸುವ ಅವರ ಕಾರ್ಯನೀತಿಯು ಸಮಸ್ಯೆಯಾಗಿತ್ತು. ಡಚ್ಚರು ಹಾಗೂ ಬ್ರಿಟಿಷರ ಬರುವಿಕೆಯಿಂದ ಪರಿಸ್ಥಿತಿಯು ಮತ್ತಷ್ಟು ಉಲ್ಬಣಗೊಂಡಿತು. ವೆಂಕಟನಿಗೆ ಗಂಡು ಮಕ್ಕಳಿರಲಿಲ್ಲ. ಅವನ ಸೋದರಳಿಯನಾದ ಶ್ರೀರಂಗನನ್ನು ಉತ್ತರಾಧಿಕಾರಿಯಾಗಿ ನೇಮಕ ಮಾಡಿದನು. ಜಗದೇವರಾಯನಿಂದ ನೂತನ ರಾಜಕುಮಾರನ ಕೊಲೆಯ ದುರಂತ ಕಥೆ ಹಾಗೂ ಎಚ್ಚಮನಾಯಕನ ಪೌರುಷವು ಎಲ್ಲರಿಗೂ ಚಿರಪರಿಚಿತವಾದ ಸಂಗತಿ. ಅದರ ಫಲವಾಗಿ ಪೌರ ಯುದ್ಧವು ನಡೆಯಿತು; ಈ ಪರಿಸ್ಥಿತಿಯ ಸಂಪೂರ್ಣ ಲಾಭವನ್ನು ನೆರೆಯ ಮುಸಲ್ಮಾನ ರಾಜ್ಯಗಳು ಪಡೆದುಕೊಂಡವು. ಕೊನೆಯ ದೊರೆಯಾದ ಮುಮ್ಮಡಿ ಶ್ರೀರಂಗನು, ಮುನ್ನುಗ್ಗುತ್ತಿದ್ದ ಬಿಜಾಪುರ ಹಾಗೂ ಗೋಲ್ಕೊಂಡೆ ಮುಸಲ್ಮಾನ ಸೈನ್ಯವನ್ನು ತಡೆಯಲಾಗದೆ, ಕ್ರಿ.ಶ.೧೬೪೯ರಲ್ಲಿ ಮೈಸೂರಿಗೆ ಪಲಾಯನ ಮಾಡಿದನು. ಅರವೀಡು ರಾಜವಂಶದ ಅರಸರು ಪುರಾತನ ಸಾಮ್ರಾಜ್ಯದ ವೈಭವವನ್ನು ಪುನರುಜ್ಜೀವನಗೊಳಿಸಲು ಸಾಧ್ಯವಾಗಲಿಲ್ಲ, ಆದರೆ ಅಡ್ಡಿ–ಆತಂಕಗಳ ನಡುವೆಯೂ, ಕರ್ನಾಟಕ ಸಾಮ್ರಾಜ್ಯದ ಕುರುಹುಗಳನ್ನಾದರೂ ಉಳಿಸಿಕೊಂಡು, ಸೀಮಿತ ಯಶಸ್ಸನ್ನು ಕಂಡರೂ, ಮುಸಲ್ಮಾನರ ಧಾಳಿಗಳಿಗೆ ವಿರೋಧವನ್ನು ಒಡ್ಡಿದರು. ಅದೇ ಸಮಯದಲ್ಲಿ, ಮಹಾರಾಷ್ಟ್ರದ ಬೆಟ್ಟಗಳಲ್ಲಿ ತನ್ನ ಅಧಿಕಾರವನ್ನು ಶಿವಾಜಿಯು ಅದಾಗಲೇ ಸ್ಥಾಪಿಸಿಕೊಂಡಿದ್ದನು. ಶ್ರೀರಂಗನು ಮರಣ ಹೊಂದುವ ಒಂದು ವರ್ಷಕ್ಕೆ ಮುನ್ನ, ಶಿವಾಜಿಗೆ ಪಟ್ಟಾಭಿಷೇಕ ಮಾಡಲಾಯಿತು.

## ವಿಜಯನಗರದ ಸಮಕಾಲೀನರು

### ಬಹಮನಿ ಸಾಮ್ರಾಜ್ಯ

ಕ್ರಿ.ಶ.೧೩೪೭–೧೫೨೭ಗಳ ನಡುವೆ, ದಕ್ಷಿಣದಲ್ಲಿ ಇಂಡೋ–ಸ್‌ಸೆನಿಕ್ ಕಲಾ ಕ್ಷೇತ್ರದಲ್ಲಿ ಬಹಮನಿ ಸುಲ್ತಾನರು ನೀಡಿದ ಕೊಡುಗೆಗಾಗಿ ಸ್ಮರಿಸಿಕೊಳ್ಳಲಾಗುತ್ತದೆ. ಕ್ರಿ.ಶ.೧೩೪೭ರಲ್ಲಿ ಗುಲ್ಬರ್ಗಾದಲ್ಲಿ ಅಲ್ಲಾವುದ್ದೀನ್ ಹಸನ್‌ನಿಂದ ಸ್ಥಾಪಿತವಾದ ಬಹಮನಿ ರಾಜ್ಯವು, ಇತಿಹಾಸದುದ್ದಕ್ಕೂ ವಿಜಯನಗರದೊಡನೆ ಸೆಣೆಸಾಡಿದೆ. ಅಪ್ರತಿಮ ಸೌಂದರ್ಯದ ಬೃಹತ್ ಸ್ಮಾರಕವಾದ ಗುಲ್ಬರ್ಗಾದ ಸುಪ್ರಸಿದ್ಧ ಜಾಮಿಯಾ ಮಸೀದಿಯನ್ನು ಕ್ರಿ.ಶ.೧೩೬೭ರಲ್ಲಿ ಮಹಮ್ಮದ್ ಬಹಮನ್ ಶಾ ನಿರ್ಮಿಸಿದನು.ಕರ್ನಾಟಕದಲ್ಲಿ ಅವರು ನಿರ್ಮಿಸಿದ ಕಟ್ಟಡಗಳಲ್ಲಿ ಗುಮ್ಮಟಗಳು, ಗಾರೆಯ ಕಮಾನು ಚಾವಣಿಗಳು ಹಾಗೂ ಕಮಾನುಗಳನ್ನು ಪರಿಚಯಿಸಿದರು.

ಕ್ರಿ.ಶ.೧೩೯೭–೧೪೨೨ರವರೆಗೆ ಆಳಿದ ಫ಼ಿರೋಜ಼್ ಶಾ ಮಹಾನ್ ಸುಲ್ತಾನನೂ, ಸಂಸ್ಥಾಪಕನ ಮೊಮ್ಮಗನೂ ಆಗಿದ್ದನು. ರೆಡ್ಡಿಗಳಿಂದ ರಾಜಮಂಡ್ರಿಯನ್ನು ಕಸಿದುಕೊಂಡು, ರಾಜ್ಯವನ್ನು ಪೂರ್ವದಲ್ಲಿ ವಿಸ್ತರಿಸಿದನು. ಪಂಡಿತವರೇಣ್ಯರ ಸಹವಾಸದಲ್ಲಿ ಆನಂದಿಸುತ್ತಿದ್ದ ಆತನು, ಸುರ್ಹಿಂದಿ ಎಂಬ ವಿದ್ವಾಂಸನಿಗೂ ಹಾಗೂ ಹಸನ್ ಗಿಲಾನಿ ಎಂಬ ಖಗೋಳಶಾಸ್ತ್ರಜ್ಞನಿಗೂ ಆಶ್ರಯವನ್ನು ನೀಡಿದ್ದನು. ದೌಲತಾಬಾದಿನಲ್ಲಿ ಅವನು ವೀಕ್ಷಣಾಲಯವನ್ನು ಸ್ಥಾಪಿಸಿದನು.

ಕ್ರಿ.ಶ.೧೪೨೨–೩೬ರವರೆಗೆ ಆಳಿದ ಅಹ್ಮದ್, ಫ಼ಿರೋಜ಼್‌ನ ಉತ್ತರಾಧಿಕಾರಿಯಾಗಿ, ಬೀದರ್‌ಗೆ ತನ್ನ ರಾಜಧಾನಿಯನ್ನು ಸ್ಥಳಾಂತರಗೊಳಿಸಿದನು. ಅಲ್ಲಿ, ಅವನು ಅನೇಕ ಉತ್ತಮ ಅರಮನೆಗಳನ್ನು ಹಾಗೂ ಆತನ ಕಾಲದ ಉತ್ತಮ ಸೃಷ್ಟಿಯಾದ ಸೋಲಾಹ್ ಕಂಭ್ ಮಸೀದಿಯನ್ನು ಕಟ್ಟಿದನು.

ಕೋಟೆ ಗೋಡೆಗಳು, ಗುಲಬರ್ಗಾ





*ಜಾಮಿಯಾ ಮಸೀದಿ, ಗುಲಬರ್ಗಾ*

ಬಂದೇ ನವಾಜನೆಂಬ ಸೂಫಿ ಸಂತನ ಬಗ್ಗೆ ಅಪಾರವಾದ ಭಕ್ತಿಯನ್ನು ಹೊಂದಿದ್ದ ಅವನನ್ನು ವಲಿ (ಸಂತ) ಎಂದು ಕರೆಯುತ್ತಿದ್ದರು.ಬೀದರ್‌ನ ಬಳಿ ಇರುವ ಅಷ್ಟೂರಿನಲ್ಲಿನ ಆತನ ಸಮಾಧಿಯು ಅತ್ಯಂತ ಶ್ರದ್ಧಾಪೂರ್ಣ ಸ್ಥಳವಾಗಿದೆ.

ಬಹಮನಿ ಇತಿಹಾಸದಲ್ಲಿನ ಮತ್ತೊಂದು ಮಹಾನ್ ವ್ಯಕ್ತಿತ್ವವೆಂದರೆ, ಮಹಮದ್ ಗವಾನ್ – ಕ್ರಿ.ಶ.೧೪೧೧ರಲ್ಲಿ ಪರ್ಶಿಯಾದಲ್ಲಿ ಜನಿಸಿದ ಆತನು ಮಹಾನ್ ಮಂತ್ರಿಯಾಗಿದ್ದನು. ಕ್ರಿ.ಶ.೧೪೪೫ರಲ್ಲಿ ಆತನು ಬೀದರ್‌ಗೆ ಭೇಟಿ ನೀಡಿದಾಗ ಆತನಿಗೆ ಬಹಮನಿ ಆಸ್ಥಾನದಲ್ಲಿ ಪ್ರಮುಖ ಸ್ಥಾನವನ್ನು ನೀಡಲಾಯಿತು. ಕ್ರಿ.ಶ.೧೪೬೧ರಿಂದ, ಕ್ರಿ.ಶ.೧೪೮೧ರಲ್ಲಿ ಆತನ ಮರಣದವರೆಗೂ, ಆತನು ರಾಜ್ಯದ ಮುಖ್ಯ ಆಡಳಿತಾಧಿಕಾರಿಯಾಗಿದ್ದನು. ಇಬ್ಬರು ಸುಲ್ತಾನರು ಕಿರಿಯರಾಗಿದ್ದಾಗ, ರಾಜ್ಯದ ಪ್ರಭಾರವನ್ನು ಹೊತ್ತು, ದಕ್ಷಿಣದಲ್ಲಿ ಹುಬ್ಬಳ್ಳಿಯವರೆಗೂ, ಪಶ್ಚಿಮದಲ್ಲಿ ಗೋವಾ ಹಾಗೂ ಕೊಂಕಣ ಕರಾವಳಿಯವರೆಗೂ, ಪೂರ್ವದಲ್ಲಿ ಕೊಂಡವೀಡು ಹಾಗೂ ರಾಜಮಂಡ್ರಿಯವರೆಗೂ ರಾಜ್ಯವನ್ನು ವಿಸ್ತರಿಸಿದನು. ಸ್ವತಃ ವಿದ್ವಾಂಸನೂ, ಬರಹಗಾರನೂ ಅಗಿದ್ದು, ಬೀದರ್‌ನಲ್ಲಿ ಕಾಲೇಜೊಂದರ ಸ್ಥಾಪನೆ ಮಾಡಿ, ಅಲ್ಲಿ ಗ್ರಂಥಾಲಯದ ವ್ಯವಸ್ಥೆಯನ್ನು ತನ್ನ ವ್ಯಕ್ತಿಗತ ಆದಾಯದಲ್ಲಿ ಮಾಡಿದನು. ಈ ಅವಧಿಯಲ್ಲಿ ಗುಲ್ಬರ್ಗಾ ಹಾಗೂ ಬೀದರ್‌ಗಳಲ್ಲಿ ನಿರ್ಮಿಸಿದ ಕೋಟೆಗಳನ್ನು ಕುರಿತಾಗಿ ಇಲ್ಲಿ ವಿಶೇಷವಾಗಿ ಹೇಳಬೇಕಾಗಿದೆ. ಇಂದು ಪಾಳುಬಿದ್ದ ಕಾಲೇಜಿನ ಕಟ್ಟಡವು (ಮದರಸಾ), ಒಮ್ಮೆ ಸುಂದರ ರಚನೆಯಾಗಿತ್ತು. ಆಸ್ಥಾನದ ಕುತಂತ್ರಗಳಿಗೆ ಬಲಿಯಾಗಿ, ತಾನೇ ಸ್ವತಃ ಶಿಕ್ಷಣ ನೀಡಿ, ಬೆಳೆಸಿದ ಸುಲ್ತಾನ್ ಮಹಮ್ಮದ್‌ನು ಆತನಿಗೆ ಮರಣದಂಡನೆಯನ್ನು ವಿಧಿಸಿದನು. ಅವನೊಂದಿಗೆ, ರಾಜ್ಯದ ವೈಭವವು ಕಣ್ಮರೆಯಾಗಿ, ಬೇಗನೆ ಡೆಕ್ಕನ್‌ನ ಐದು ಶಾಹಿ ರಾಜ್ಯಗಳಾಗಿ ವಿಂಗಡನೆಗೊಂಡಿತು.ಗುಲ್ಬರ್ಗಾದ ಉತ್ತಮ ಇಂಡೋ–ಸರ್ಸೆನಿಕ್ ಕಟ್ಟಡಗಳಾದ ಬಂದೇ ನವಾಜ್ ದರ್ಗ, ಜಾಮಿಯ ಮಸೀದಿ, ಸಾತ್ ಗುಂಬಜ್, ಇತ್ಯಾದಿಗಳು ಹಾಗೂ, ಬೀದರ್‌ನಲ್ಲಿರುವ ಗವಾನನ ಮದರಸಾ ಹಾಗೂ ಅಷ್ಟೂರಿನ ಆತನ ಗುಮ್ಮಟಗಳು, ಈ ಕಾಲದಲ್ಲಿ ನೀಡಿದ ಪ್ರಮುಖ ಕೊಡುಗೆಗಳು.


## ಬಿಜಾಪುರದ ಆದಿಲ್‌ಶಾಹಿಗಳು

ಬಹಮನಿಯರ ಅವನತಿಯೊಂದಿಗೆ ಉದಯಿಸಿದ ಐದು ಶಾಹಿ ರಾಜ್ಯಗಳಲ್ಲಿ, ಕ್ರಿ.ಶ.೧೪೮೯–೧೬೮೬ರವರೆಗೆ ಕರ್ನಾಟಕದ ಬಹುತೇಕ ಭಾಗವನ್ನು ಆದಿಲ್ ಶಾಹಿಗಳು ಆಳಿದರು. ಕ್ರಿ.ಶ.೧೪೮೯ರಲ್ಲಿ ಇದರ ಸ್ಥಾಪನೆಯನ್ನು, ಬಹಮನಿಯರ ಕೆಳಗೆ ಸೇನಾಧಿಪತಿ ಹಾಗೂ ರಾಜ್ಯಪಾಲನಾಗಿ ಕಾರ್ಯ ನಿರ್ವಹಿಸಿದ ಯೂಸುಫ್ ಆದಿಲ್ ಖಾನನು ಸ್ಥಾಪಿಸಿದನು. ಆದಿಲ್ ಶಾಹಿಗಳು ಕಲೆಯ ಮಹಾನ್ ಆಶ್ರಯದಾತರು ಹಾಗೂ ವಿದ್ವಾಂಸರೂ ಆಗಿದ್ದರು.ಇಟಾಲಿಯನ್ ಯಾತ್ರಿಕನಾದ ವಾರ್ಥೆಮನು, ಯೂಸುಫ್‌ನನ್ನು “ಬಲಶಾಲಿ ಹಾಗೂ ಸಮೃದ್ಧ ದೊರೆ” ಎಂದು ಕರೆದಿದ್ದಾನೆ. ಕ್ರಿ.ಶ.೧೫೧೦–೩೫ರಿಂದ ಅಧಿಕಾರದಲ್ಲಿದ್ದ ಆತನ ಮಗನಾದ ಇಸ್ಮಾಯಿಲ್‌ನು, ಇರಾನಿನ ಶಾಹನಿಂದ ಅರಸನೆಂದು ಗುರುತಿಸಲ್ಪಟ್ಟು, ಅಲ್ಲಿಂದ ಬಿಜಾಪುರಕ್ಕೆ ರಾಯಭಾರಿಯನ್ನು ಕಳುಹಿಸಲಾಗಿತ್ತು. ಕ್ರಿ.ಶ.೧೫೫೭–೮೦ರವರೆಗೆ ಆಳಿದ ಇಸ್ಮಾಯಿಲ್‌ನ ಮೊಮ್ಮಗನಾದ ಆಲಿಯು, ವಿಜಯನಗರದ ರಾಮರಾಯನ ಜೊತೆ ಸ್ನೇಹ–ಸಂಬಂಧವನ್ನು ಹೊಂದಿದ್ದನು; ರಾಮರಾಯನು ಅಲಿಯನ್ನು ಮಗನಾಗಿ ದತ್ತು ತೆಗೆದುಕೊಂಡಿದ್ದನು.ಆದರೆ, ಇತರ ಶಾಹಿ ಸುಲ್ತಾನರು ವಿಜಯನಗರ ಸಾಮ್ರಾಜ್ಯದ ವಿರುದ್ಧದ ಒಕ್ಕೂಟವನ್ನು ಸೇರುವಂತೆ ಅಲಿಗೆ ಒತ್ತಾಯ ಮಾಡಿದರು ತತ್ಪರಿಣಾಮವಾಗಿ ವಿಜಯನಗರ

ಸೈನ್ಯವನ್ನು ಕ್ರಿ.ಶ.೧೫೬೫ರಲ್ಲಿ ಸೋಲಿಸಿದರು. ಸುಂದರವಾದ ಬಿಜಾಪುರ ಜಾಮಿಯಾ ಮಸೀದಿಯು ಆತನಿಂದ ನಿರ್ಮಾಣಗೊಂಡಿತು.

ಕ್ರಿ.ಶ.1580–1626ರವರೆಗೆ, ಎರಡನೆಯ ಇಬ್ರಾಹಿಂ ಅಲಿಯ ಸೋದರಳಿಯನಾಗಿದ್ದು ರಾಜನಾದನು. ಕ್ರಿ.ಶ.೧೬೧೯ರಲ್ಲಿ ಬೀದರ್‌ನ ಬಾರಿದ್ ಶಾಹಿ ರಾಜ್ಯವನ್ನು ವಶಪಡಿಸಿಕೊಂಡು ತನ್ನ ರಾಜ್ಯದೊಂದಿಗೆ ಸೇರ್ಪಡೆ ಮಾಡಿಕೊಂಡನು.ಆತನು ಸಹಿಷ್ಣುವಾದ ಅರಸನಾಗಿದ್ದು, ಜಗದ್ಗುರು ಎಂಬ ಅಡ್ಡಹೆಸರನ್ನು ಹೊಂದಿದ್ದನು. ಆತನ ಕೋಟೆಯ ಕೊತ್ತಲದಲ್ಲಿ ನರಸಿಂಹ ಸರಸ್ವತಿಯ (ದತ್ತಾತ್ರೇಯ) ದೇವಾಲಯ ನಿರ್ಮಾಣವನ್ನು ಮಾಡಿದನು. ಹಿಂದೂ ಸಂಗೀತಪ್ರೇಮಿಯಾಗಿದ್ದ ಅವನು, ತನ್ನ ಆಸ್ಥಾನದಲ್ಲಿ ೩೦೦ ಹಾಡುಗಾರರನ್ನು ಹೊಂದಿದ್ದನು. ಆತನ ನಂತರ, ಕ್ರಿ.ಶ.೧೬೨೭–೫೬ರವರೆಗೆ ಆಡಳಿತವನ್ನು ನಡೆಸಿದ ಮಹಮದ್‌ನು ರಾಜ್ಯವನ್ನು ದಕ್ಷಿಣದಲ್ಲಿ ಬೆಂಗಳೂರಿನವರೆಗೆ ಹಾಗೂ ದಕ್ಷಿಣ–ಪೂರ್ವದಲ್ಲಿ ವೆಲ್ಲೂರಿನವರೆಗೆ ವಿಸ್ತರಿಸಿದನು. ಬೆಂಗಳೂರು ಹಾಗೂ ಅದರ ಸುತ್ತಲಿನ ಪ್ರದೇಶಗಳನ್ನು ಶಿವಾಜಿಯ ತಂದೆಯಾದ, ಶಾಹಜಿ ಭೋಸ್ಲೆಗೆ ಜಾಹಗೀರಾಗಿ ನೀಡಲಾಗಿತ್ತು. ಕ್ರಿ.ಶ.೧೬೮೬ರವರೆಗೆ, ಮರಾಠರು ಬೆಂಗಳೂರನ್ನು ತಮ್ಮ ಬಳಿಯಲ್ಲೇ ಇರಿಸಿಕೊಂಡಿದ್ದರು. ಬಿಜಾಪುರದಲ್ಲಿ ಆತನು ಭವ್ಯವಾದ ಗೋಲ್‌ಗುಂಬಜ್‌ನ್ನು ನಿರ್ಮಾಣ ಮಾಡಿದನು. ಕ್ರಿ.ಶ.೧೬೫೬–೭೨ರವರೆಗೆ ಆಳಿದ ಎರಡನೆಯ ಅಲಿಯು ಉತ್ತರಾಧಿಕಾರಿಯಾದನು. ಕ್ರಿ.ಶ.೧೬೭೨–೮೬ರವರೆಗಿನ ಸಿಕಂದರ್ ಆದಿಲ್ ಶಾಹಿಯ ಆಳ್ವಿಕೆಯಲ್ಲಿ, ಕ್ರಿ.ಶ.೧೬೮೬ರಲ್ಲಿ ಔರಂಗ್‌ಜೇಬ್‌ನಿಂದ ಆದಿಲ್ ಶಾಹಿ ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳಲ್ಪಟ್ಟಿತು. ಅಸರ್ ಮಹಲ್ ಹಾಗೂ ಇಬ್ರಾಹಿಂ ರೋಜ್ಹಾದಂತಹ ಅದಿಲ್ ಶಾಹಿಯು ಕಟ್ಟಡಗಳಲ್ಲಿ, ಸುಂದರ ವರ್ಣಚಿತ್ರಗಳು, ರಾಗಮಾಲ ವರ್ಣಚಿತ್ರಗಳು ಹಾಗೂ ಚಾಂದ್ ಬೀಬಿಯು ಸೇರಿದಂತೆ, ರಾಜ ಮನೆತನದ ಸದಸ್ಯರ ವೈಯಕ್ತಿಕ ವರ್ಣಚಿತ್ರಗಳನ್ನು ಬಿಜಾಪುರದ ಸಂಗ್ರಾಹಾಲಯದಲ್ಲಿ ಸಂರಕ್ಷಿಸಲಾಗಿದೆ.ಬಿಜಾಪುರದ ಕೆಲವು ಅರಸರು ಶಿಯಾಗಳಾಗಿದ್ದು, ತಬುತ್‌ಗಳನ್ನು ಸ್ಥಾಪನೆ ಮಾಡಿ, ಮೊಹರ್‍ರಂನ ಆಚರಣೆಯನ್ನು ಮಾಡುವುದು ಕರ್ನಾಟಕದಲ್ಲಿ ಸರ್ವೇಸಾಮಾನ್ಯವಾಯಿತು. ಅವರ ಆಸ್ಥಾನದಲ್ಲಿ, ದಖ್ಖನಿ ಹಿಂದಿ ಎಂಬ ಉರ್ದುವಿನ ಒಂದು ರೂಪವೂ ಅಭಿವೃದ್ಧಿ ಆಯಿತು.

ಆ ವೇಳೆಗಾಗಲೇ, ದಕ್ಷಿಣಕ್ಕೆ ಮುಘಲರು ತಮ್ಮ ಪ್ರದೇಶವನ್ನು ವಿಸ್ತರಿಸಿ, ಕ್ರಿ.ಶ.೧೬೮೬ರಲ್ಲಿ ಬೆಂಗಳೂರನ್ನು ಗೆದ್ದುಕೊಂಡರು ಅವರು ಕರ್ನಾಟಕದ ಸಿರಾ ಹಾಗೂ ತಮಿಳುನಾಡಿನ ಆರ್ಕಾಟ್‌ನ್ನು ತಮ್ಮ ಪ್ರಮುಖ ಆಡಳಿತ ಕೇಂದ್ರಗಳಾಗಿ ಮಾಡಿಕೊಂಡರು. ಸಿರಾದಲ್ಲಿ ಕೆಲವು ಅದ್ಭುತ ಮುಘಲ್ ಕಟ್ಟಡಗಳಿವೆ.ಸವಣೂರು, ಸಿರಾ ಹಾಗೂ ಆದವಾನಿಗಳ ನವಾಬರು ಮೊಗಲರ ಅಡಿಯಲ್ಲಿ ಕನ್ನಡದ ಪ್ರದೇಶಗಳ ಆಡಳಿತವನ್ನು ಮಾಡಿದರು, ಮುಘಲರ ಮತ್ತೊಬ್ಬ ಸಾಮಂತನಾದ ಗೋಲ್ಕೊಂಡಾದ ನಿಜಾಮನು ಕೆಲವು ಕನ್ನಡ ಜಿಲ್ಲೆಗಳ ಆಡಳಿತವನ್ನು ವಹಿಸಿಕೊಂಡಿದ್ದನು.



ಜುಮ್ಮಾ ಮಸೀದಿ ಬಿಜಾಪುರ



ಸಾಥ್ ಮಂಜಿಲ್ ಬಿಜಾಪುರ

ಗಂಗನ್ ಮಹಲ್ ಬಿಜಾಪುರ



ಇಬ್ರಾಹಿಂ ರೋಜಾ ಬಿಜಾಪುರ

